ವಿಜಯಪುರ । ಸಂಪುಟ 04 । ಸಂಚಿಕೆ 250 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ನವೆಂಬರ್ 29, 2026

"ಭಾರತದ ಜನಸಂಖ್ಯೆಯ ಸ್ಥಿರೀಕರಣ ನೀತಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿರುವ ಕರ್ನಾಟಕ ಮತ್ತಿತರ ರಾಜ್ಯಗಳ ರಾಜಕೀಯ ಧ್ವನಿಯನ್ನು ಪ್ರಸ್ತಾವಿತ ಕ್ಷೇತ್ರ ಮರುವಿಂಗಡಣೆ (ಜಜಟುಟುಣಚಿ–ಣಬಠಟಿ) ಪ್ರಕ್ರಿಯೆಯು ಹೇಗೆ ಬಲಪಡಿಸುತ್ತದೆ ಎಂಬುದಕ್ಕೆ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಬೇಕು."



■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ

ಡಿ.5–6 ರಂದು ದೇಶಿ ತಳಿ ನಾಯಿಮರಿಗಳ ದತ್ತು ಅಭಿಯಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ದೇಶಿ ತಳಿ ನಾಯಿಗಳ ದತ್ತು ಸ್ವೀಕಾರವನ್ನು ಪ್ರೋತ್ಸಾಹಿಸುವುದು ಹಾಗೂ ಪ್ರೀತಿಯ ಮನೆಗಳಿಗಾಗಿ ಕಾಯುತ್ತಿರುವ ನಾಯಿಮರಿಗಳಿಗೆ ಉತ್ತಮ ಕುಟುಂಬಗಳನ್ನು ಹುಡುಕಿಕೊಡುವ ಉದ್ದೇಶದಿಂದ ಟೇಲ್ಸ್ ಆಫ್ ಬಿಜಾಪುರ ಮತ್ತು ಪ್ರಾವ್ಯ ಅನಿಮಲ್ ಫೌಂಡೇಶನ್ ಜಂಟಿಯಾಗಿ ಡಿಸೆಂಬರ್ 5 ಮತ್ತು 6ರಂದು ವಿಜಯಪುರದಲ್ಲಿ ಎರಡು ದಿನಗಳ ದತ್ತು ಸ್ವೀಕಾರ ಅಭಿಯಾನವನ್ನು ಆಯೋಜಿಸಿವೆ.ಸಾಕುಪ್ರಾಣಿಗಳನ್ನು ಖರೀದಿಸುವ ಬದಲು ದತ್ತು ಪಡೆಯುವ ಮನೋಭಾವವನ್ನು ಬೆಳೆಸುವುದು, ದೇಶಿ ತಳಿ ನಾಯಿಗಳ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವುದು ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಈ ಕಾರ್ಯಕ್ರಮದಲ್ಲಿ ಪ್ರೀತಿಯ ಮನೆಗಳಿಗಾಗಿ ಕಾಯುತ್ತಿರುವ ಮುದ್ದಾದ ನಾಯಿಮರಿಗಳನ್ನು ಭೇಟಿ ಮಾಡಿ, ಅವುಗಳ ಬಗ್ಗೆ ಮಾಹಿತಿ ಪಡೆದು ದತ್ತು ಪಡೆಯಲು ಸಾರ್ವಜನಿಕರಿಗೆ ಅವಕಾಶವಿರಲಿದೆ.

ದೇಶಿ ತಳಿ ನಾಯಿಗಳು ನಮ್ಮ ಹವಾಮಾನ ಮತ್ತು ಪರಿಸರಕ್ಕೆ ಹೊಂದಿಕೊಂಡಿರುವ ಪ್ರಾಣಿಗಳಾಗಿದ್ದು, ಅವುಗಳಿಗೂ ಪ್ರೀತಿಯ ಮನೆ ಮತ್ತು ಸುರಕ್ಷಿತ ಜೀವನದ ಹಕ್ಕಿದೆ. ದತ್ತು ಸ್ವೀಕಾರದ ಮೂಲಕ ಪ್ರಾಣಿಗಳ ಕಲ್ಯಾಣದಲ್ಲಿ ಸಾರ್ವಜನಿಕರು ಕೈಜೋಡಿಸಬೇಕು ಎಂಬುದು ಸಂಘಟಕರ ಆಶಯವಾಗಿದೆ. ಕಾರ್ಯಕ್ರಮದ ವಿವರಗಳು: * ಡಿಸೆಂಬರ್ 5: 90' Nest Cafe 3–6 ಕಒ * ಡಿಸೆಂಬರ್ 6: Urban Brew 12–3 PM

ವಿಜಯಪುರದಲ್ಲಿ ಟೇಲ್ಸ್ ಆಫ್ ಬಿಜಾಪುರ ಮತ್ತು ಪ್ರಾವ್ಯ ಅನಿಮಲ್ ಫೌಂಡೇಶನ್ ವತಿಯಿಂದ ವಿಶೇಷ ಕಾರ್ಯಕ್ರಮ

ವಿಜಯಪುರ ಆಯೋಜಕರು: ಟೇಲ್ಸ್ ಆಫ್ ಬಿಜಾಪುರ ಮತ್ತು ಪ್ರಾವ್ಯ ಅನಿಮಲ್ ಫೌಂಡೇಶನ್. ವಿಜಯಪುರದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಈ ನಾಯಿಮರಿಗಳಿಗೆ ಪ್ರೀತಿಯ ಕುಟುಂಬಗಳನ್ನು ಕಲ್ಪಿಸುವ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ.



'ವೃಕ್ಷ ಮಕ್ಕಳ ಓಟ' ಕ್ಕೆ ಅಭೂತಪೂರ್ವ ಬೆಂಬಲ

ವಿಜಯಪುರ: ಡಿ.13ರಂದು ನಡೆಯುವ ವೃಕ್ಷಥಾನ್ ಹೆರಿಟೇಜ್ ರನ್ ನಿಮಿತ್ತ ಇಂದು ಶನಿವಾರ ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ 'ವೃಕ್ಷ ಮಕ್ಕಳ ಓಟ' ನಡೆಯಿತು.

ವಿಜಯಪುರ ಉಪವಿಭಾಗಾಧಿಕಾರಿ ಆಯುಕ್ತೆ ಜುಫಿಷಾನ್ ಹಕ್ ಮಕ್ಕಳ ಓಟಕ್ಕೆ ಹಸಿರು ನಿಶಾನೆ ತೋರಿ, ಶುಭಹರಸಿದರು.

ವೃಕ್ಷಥಾನ್ ಹೆರಿಟೇಜ್ ರನ್– 2026 ಅಂಗವಾಗಿ ಇದು ಪೂರ್ವಭಾವಿ ಓಟವಾಗಿದ್ದು, ಸರಕಾರಿ, ಅನುದಾನಿತ–ಅನುದಾನ ರಹಿತ ಶಾಲೆಗಳ ಸುಮಾರು ಹನ್ನೆರಡು ನೂರು ಮಕ್ಕಳು ಭಾಗವಹಿಸಿದ್ದರು.

ದಾವಣಗೆರೆ, ಶಿವಮೊಗ್ಗ, ಸೊಲ್ಲಾಪುರ, ಜಮಖಂಡಿ ಹಾಗೂ ಬಾಗಲಕೋಟೆಯಲ್ಲದೇ ಅನೇಕ ಕಡೆಯ ಶಾಲೆಗಳ ಮಕ್ಕಳು ಸ್ವಯಂ ಪ್ರೇರಣೆಯಿಂದ ಓಡಿದ್ದು ವಿಶೇಷವಾಗಿತ್ತು. 400 ಮೀಟರ್ ಓಟದಲ್ಲಿ ಮೊದಲು ಬಂದವರಿಗೆ 10 ಸಾವಿರ ರೂ., 200 ಮೀಟರ್‌ಗೆ ಐದು ಸಾವಿರ ಹಾಗೂ 100 ಮೀಟರ್ ಓಟಕ್ಕೆ ಎರಡೂವರೆ ಸಾವಿರ ರೂ. ಬಹುಮಾನಗಳನ್ನು ಗೆದ್ದವರನ್ನು ಆಯ್ಕೆ ಮಾಡಲಾಯಿತು. ಸಮಾಧಾನಕರ ಬಹುಮಾನವಾಗಿ 2,500, 1,000 ಹಾಗೂ ಐದು ನೂರು ರೂ. ಬಹುಮಾನವನ್ನು ವೃಕ್ಷಥಾನ್‌ನ ಕಾರ್ಯಕ್ರಮದಲ್ಲಿ ನೀಡಲಾಗುತ್ತದೆ. ನರ್ಸರಿ, ಎಲ್.ಕೆ.ಜಿ ಮಕ್ಕಳಿಗೆ ನೂರು ಮೀಟರ್ ಓಟ ಏರ್ಪಡಿಸಲಾಗಿತ್ತು. ಹುಡುಗ–ಹುಡುಗಿಯರಿಗೆ ಪ್ರತ್ಯೇಕ ಬಹುಮಾನ ಕೊಡಲಾಗುತ್ತಿದೆ.ಇದೇ ಸಂದರ್ಭದಲ್ಲಿ ಮಕ್ಕಳಲ್ಲಿ ಕಾಣಿಸುವ ಕಣ್ಣಿನ ಸಮಸ್ಯೆ ಮಯೋಪಿಯಾ ಉಚಿತ ತಪಾಸಣೆ ಶಿಬಿರ ಕೂಡ ನಡೆಯಿತು. ಟಾಟಾ ಕಂಪನಿಯ ಟಾಟಾ ಐ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ವೃಕ್ಷಥಾನ್ ಸಂಚಾಲಕ ಡಾ.ಮುರುಗೇಶ ಪಟ್ಟಣಶೆಟ್ಟಿ, ವಿಡಿಎ ಅಧ್ಯಕ್ಷರಾದ ಡಾ.ಗಂಗಾಧರ ಸಂಬಣ್ಣಿ, ವಿಸಿಜಿ ಉಪಾಧ್ಯಕ್ಷ ಶಿವನಗೌಡ ಪಾಟೀಲ, ಕ್ರೀಡಾ ಇಲಾಖೆಯ ರಾಜಶೇಖರ ದೈವಾಡಗಿ, ಉಸ್ತುವಾರಿಗಳಾದ ಅಮಿತ್ ಬಿರಾದಾರ, ಶಿವಾನಂದ ಕುಂಬಾರ ಹಾಗೂ ಶಾಲೆಗಳ ದೈಹಿಕ ಶಿಕ್ಷಕರು, ಶಿಕ್ಷಕಿಯರು ಇದ್ದರು.

■ ವೃಕ್ಷಥಾನ್ ಹೆರಿಟೇಜ್ ರನ್- 2026 ಅಂಗವಾಗಿ ಪೂರ್ವಭಾವಿ ಓಟ । ಸರಕಾರಿ, ಅನುದಾನಿತ-ಅನುದಾನ ರಹಿತ ಶಾಲೆಗಳ ಹನ್ನೆರಡು ನೂರು ಮಕ್ಕಳು ಭಾಗಿ

'ವೃಕ್ಷ ಮಕ್ಕಳ ಓಟ' ವಿಜೇತರು

ನೂರು ಮೀಟರ್ ಓಟದಲ್ಲಿ ಶಾಂತಾ ಮುಧೋಳ, ಸುಕನ್ಯಾ, ಅನುಶ್ರೀ, ಅಮರ್ಯಾ ಹಾಗೂ ಗೌರಮ್ಮ. ಹುಡುಗರ ವಿಭಾಗಕ್ಕೆ ನರೇಂದ್ರ ಕಾತರಕಿ, ರಾಹುಲ್, ಆಶಾನ್ ಕಲಾದಗಿ, ಅಮೀನ್ ಶೇಖ್, ಅನ್ಯಗೌಡ ಪಾಟೀಲ ಕ್ರಮವಾಗಿ ವಿಜೇತರು. 200 ಮೀಟರ್ ನಲ್ಲಿ ಸಮೃದ್ಧಿ, ತ್ರಿಶಾ ರೇವೂರ, ಶ್ರಾವ್ಯಾ ಸಿಂಗಿ, ಶಿರಿನ್, ದಾನೇಶ್ವರಿ, ಆಕಾಶ್, ಪವನ್ ಡಿ., ಅಪ್ಪು ತುಪ್ಪದ, ಅಫ್ತಾಬ್, ರುತ್ವಿಕ್ ಮಠಪತಿ ಹಾಗೂ 400 ಮೀಟರ್ ಓಟದಲ್ಲಿ ಪ್ರಿಯಾ ಮಠದ್, ರಿಯಾ, ತ್ರಿಶಿಕಾ, ಸಂಸ್ಕೃತಿ ಕುಂಬಾರ, ಐಶ್ವರ್ಯ ರಾಠೋಡ, ಪವನ್ ಅಮೋಜಿ, ಸ್ಪರ್ಶ ಅಂಬಿಗೇರ, ವೈಭವ ಡಿ., ಹಾಗೂ ಆದಿತ್ಯ ರಜಪೂತ ವಿಜೇತರಾಗಿದ್ದಾರೆ.


ಗೌರವ ಧನ ಹೆಚ್ಚಳಕ್ಕೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ನಡೆಸಿದ್ದ ಪ್ರತಿಭಟನೆ । ಮುಖ್ಯಮಂತ್ರಿಯಿಂದ ಮನವೊಲಿಕೆ । ಗೌರವ ಧನ ರೂ.2 ಸಾವಿರ ಹೆಚ್ಚಳಕ್ಕೆ ಸರ್ಕಾರದ ಭರವಸೆ

ಸಿಎಂ ಸಂಧಾನ ಯಶಸ್ವಿ: ಪ್ರತಿಭಟನೆ ಹಿಂಪಡೆದ ಆಶಾ ಕಾರ್ಯಕರ್ತೆಯರು

ಬೆಂಗಳೂರು: ಆಶಾ ಕಾರ್ಯಕರ್ತೆಯರೊಂದಿಗಿನ ಮುಖ್ಯಮಂತ್ರಿಗಳ ಸಂಧಾನ ಯಶಸ್ವಿಯಾಗಿದ್ದು ಪ್ರತಿಭಟನೆಯನ್ನು ಕಾರ್ಯಕರ್ತೆಯರು ಶನಿವಾರ ಹಿಂಪಡೆದಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿರುವ ಸಿಎಂ ಡಿಕೆ ಶಿವಕುಮಾರ್, ಆಶಾ ಕಾರ್ಯಕರ್ತೆಯರ ವೇತದಲ್ಲಿ (ಗೌರವಧನ) 2 ಸಾವಿರ ರೂಪಾಯಿ ಹೆಚ್ಚಳಕ್ಕೆ ಸರ್ಕಾರ ಸಿದ್ಧವಿರುವುದಾಗಿ ಘೋಷಿಸಿದ್ದಾರೆ.

ಪ್ರತಿಭಟನಾನಿರತರೊಂದಿಗೆ ಸಿಎಂ ಮಾತುಕತೆ ನಡೆಸಿದ್ದು ಆಶಾ ಕಾರ್ಯಕರ್ತೆಯರ ಮನವೊಲಿಕೆ ಮಾಡಿದ್ದಾರೆ. ಸರ್ಕಾರದ ಭರವಸೆಯ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂಪಡೆಯುವುದಕ್ಕೆ ಆಶಾ ಕಾರ್ಯಕರ್ತೆಯರು ನಿರ್ಧರಿಸಿದ್ದಾರೆ.



"ಆಶಾ ಕಾರ್ಯಕರ್ತೆಯರ ಹೋರಾಟದ ಮಧ್ಯದಲ್ಲಿ ಕೆಲವರು ಇವರ ಪ್ರತಿಭಟನೆಯನ್ನು ರಾಜಕಾರಣಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದರು. ಇವರು ಯಾರಿಗೂ ಬಗ್ಗಲಿಲ್ಲ. ಕೆಲವರು ಇವರ ಥರದ ಬಟ್ಟೆ ಹಾಕಿಕೊಂಡು ಬಂದು ಇವರ ಜತೆ ಸೇರಿಕೊಂಡಿದ್ದರು. ಅವರನ್ನ ಇವರು ಪತ್ತೆ ಮಾಡಿದ್ದಾರೆ. ಇವರಿಗೆ ಜಯ ಸಿಕ್ಕಿದೆ, ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ."

■ ಡಿ.ಕೆ.ಶಿವಕುಮಾರ್
ಮುಖ್ಯಮಂತ್ರಿ

ಆಶಾ ಕಾರ್ಯಕರ್ತೆಯರು ಗೌರವ ಧನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು. ಕೇಂದ್ರ ಸರ್ಕಾರ 2 ಸಾವಿರ ಕೊಡುತ್ತಿದೆ ರಾಜ್ಯ 5 ಸಾವಿರ ಕೊಡುತ್ತಿದೆ. ಕಳೆದ 2–3 ವರ್ಷದಿಂದ ಗೌರವ ಧನ ಹೆಚ್ಚಳ ಮಾಡಿಲ್ಲ ಎಂದು ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದ್ದರು. ಸಿದ್ದರಾಮಯ್ಯ ಅವರೂ ಸಹ ಗೌರವ ಧನ ಹೆಚ್ಚಳದ ಬಗ್ಗೆ ಮಾತು ಕೊಟ್ಟಿದ್ದರು, ರಾಜ್ಯ ಸರ್ಕಾರ ಈಗ ಗೌರವ ಧನವನ್ನು 2 ಸಾವಿರ ಹೆಚ್ಚಿಸಿದೆ. ಜನವರಿಯಿಂದ ಇದು ಜಾರಿಗೆ ಬರಲಿದೆ ಎಂದು ಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಆಶಾ ಕಾರ್ಯಕರ್ತೆಯರು 12 ದಿನಗಳ ಹೋರಾಟ ಮಾಡಿದ್ದರು. 15 ಸಾವಿರಕ್ಕೆ ಮನವಿ ಮಾಡಿದ್ದರು. ರಾಜ್ಯದಿಂದ ಈಗ 5, ಕೇಂದ್ರದಿಂದ 2 ಸಾವಿರ, ಪ್ರೋತ್ಸಾಹ ಧನ 1 ಸಾವಿರ ಬರುತ್ತಿದೆ. ಕೆಲಸ ಆಧಾರಿತ ಇನ್ಸೆಂಟಿವ್ ಸಹ ಬರುತ್ತಿದೆ. ಮೂರು ವರ್ಷದಿಂದ ಹೆಚ್ಚಳ ಆಗಿಲ್ಲ. ಅನೇಕ ಬೇಡಿಕೆ ಇಟ್ಟಿದ್ದಾರೆ. ಕೇಂದ್ರ ಸಹ ಇವರ ಬಗ್ಗೆ ಸಹನೆ ವಹಿಸಬೇಕು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಸಿಂದಗಿಯ ಪಿಇಎಸ್ ಪದವಿ ಹಾಗೂ ಪಪೂ ಕಾಲೇಜು ಮತ್ತು ಕಾವ್ಯ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಹೋರಾಟಕ್ಕೆ ಬೆಂಬಲ

371(ಜೆ) ವ್ಯಾಪ್ತಿ ಸೇರ್ಪಡೆಗೆ ಆಗ್ರಹಿಸಿ ವಿದ್ಯಾರ್ಥಿಗಳಿಂದ ಮನವಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಗೋಕಾಕ ಚಳುವಳಿಯ ರೂವಾರಿ ರೇ. ಚ.ರೇವಡಿಗಾರ ಪ್ರತಿಷ್ಠಾನ ಹಾಗೂ 371 ಜೆ ಹೋರಾಟ ಸಮಿತಿಯಿಂದ ವಿಜಯಪುರ ಜಿಲ್ಲೆಯನ್ನು ಸಂವಿಧಾನದ 371(ಎ) ಕಲಂ ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕೆಂಬ ಪ್ರಮುಖ ಬೇಡಿಕೆಯನ್ನು ಮುಂದಿಟ್ಟುಕೊಂಡು ಕಳೆದ 60 ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ ನಗರದ ಪಿಇಎಸ್ ಪದವಿ ಹಾಗೂ ಪಪೂ ಕಾಲೇಜು ಮತ್ತು ಕಾವ್ಯ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಬೆಂಬಲ ಸೂಚಿಸಿ ತಹಶೀಲ್ದಾರರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪಿಇಎಸ್ ಕಾಲೇಜಿನ ವಿದ್ಯಾರ್ಥಿನಿ ದಾನಮ್ಮ ದೇವಣಗಾಂವ ಮಾತನಾಡಿ, 2013ರಲ್ಲಿ ಜಾರಿಯಾದ ಡಾ. ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ವಿಜಯಪುರ ಜಿಲ್ಲೆಯ ಹೆಸರಿತ್ತು ಅದನ್ನು ಕೇಳುವ ರಾಜಕಾರಣಿಗಳ ನಿರ್ಲಕ್ಷ್ಯತನದಿಂದ ಈ ಜಿಲ್ಲೆಗೂ ಸೌಲಭ್ಯ ತಪ್ಪಿದೆ, ಅದನ್ನು ಕೊಡಿ ಎನ್ನುವ ಬೇಡಿಕೆ ನಮ್ಮದು ಎಂದರು.

ವಿದ್ಯಾರ್ಥಿನಿಯರಾದ ಸುಶ್ಮಿತಾ ಬಡಿಗೇರ, ಸೃಷ್ಟಿ ಬಿರಾದಾರ ಮಾತನಾಡಿ, 371(ಜೆ) ವಿಶೇಷ ಸ್ಥಾನಮಾನ ಅತ್ಯಂತ ಅಗತ್ಯವಾಗಿದೆ. ಈ ಹೋರಾಟ ರೂಪುಗೊಂಡಿದೆ. ಇದು ಯಾವುದೇ ವ್ಯಕ್ತಿ ಅಥವಾ ಸಂಘಟನೆಯ ವೈಯಕ್ತಿಕ ಹೋರಾಟವಲ್ಲ; ವಿಜಯಪುರ ಜಿಲ್ಲೆಯ ಭವಿಷ್ಯ, ಯುವಜನರ ಅವಕಾಶಗಳು ಹಾಗೂ ಮುಂದಿನ ಪೀಳಿಗೆಯ ಹಕ್ಕುಗಳಿಗಾಗಿ ನಡೆಯುತ್ತಿರುವ ಸಾಮೂಹಿಕ ಹೋರಾಟವಾಗಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಂದ ಸರಣಿ ಸತ್ಯಾಗ್ರಹ ನಡೆಸಲಾಗುವುದು ಅಲ್ಲದೆ ಮುಂದೆ ಎಂತಹ ಹೋರಾಟಕ್ಕೂ ಸಿದ್ದರಿದ್ದೇವೆ ಎಂದು ಘರ್ಜಿಸಿದರು. ಈ ಸಂದರ್ಭದಲ್ಲಿ ಕಾವ್ಯ ಸಮೂಹ ಶಿಕ್ಷಣ ಸಂಸ್ಥೆಯ ಚಂದ್ರಶೇಖರ ನಾಗರಬೆಟ್ಟ, ಪಿಇಎಸ್ ಕಾಲೇಜಿನ ರಮೇಶ ಧರಿಗೊಂಡ, ರವಿ ಗೋಡಕರ, ಮಹಾಂತೇಶ ದಂಡವತ, ಉಮೀದ ಕರ್ಜಗಿ, ಆಜ್ವಾಕ ಬರೋಮಣಿ, ಅಮೀರ ಮೋಪಗಾರ, ವಿಜಯಲಕ್ಷ್ಮಿ ಲೋಣಿ, ತಿಕಾಜಿ ಕಲಾಲ, ಸಮಿತಿಯ ರಂಗನಾಥ ಥೋರ್ಫೆ, ಆನಂದ ಶಾಬಾದಿ, ಪಂಡಿತ ಯಂಪೂರೆ, ಗುರುರಾಜ ಪಡಶೆಟ್ಟಿ, ಶಂಕರ ಮಲ್ಲೇದ, ಬಾಬು ವಾಲೀಕಾರ, ಸಿದ್ದು ಅಂಬಳನೂರ, ಉಪಸ್ಥಿತರಿದ್ದರು.

ಸಂಭ್ರಮದಿಂದ ಜರುಗಿದ ಬನಶಂಕರಿದೇವಿ ರಥೋತ್ಸವ

■ ಉದಯರಶ್ಮಿ ದಿನಪತ್ರಿಕೆ

ನಿಡಗುಂದಿ: ಪಟ್ಟಣದ ಆರಾಧ್ಯ ದೇವತೆ ಬನಶಂಕರಿದೇವಿಯ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸಂಜೆ ನಡೆದ ರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಭಕ್ತಿ, ಸಡಗರ ಹಾಗೂ ಸಂಭ್ರಮದಿಂದ ಜರುಗಿತು.

ಸುಮಂಗಲೆಯರ ಕುಂಭಮೇಳ, ಭಾವಚಿತ್ರ ಮೆರವಣಿಗೆ

ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಬೆಳಿಗ್ಗೆ ಮಹಾದಾನಿ ಬಸಪ್ಪ ಶೆಡಗಟ್ಟಿಯವರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಸುಮಂಗಲೆಯರ ಕುಂಭಮೇಳ ವಿಶೇಷ ಆಕರ್ಷಣೆಯಾಗಿತ್ತು. ಸಂಜೆ ದೇವಿಯ ಮಾಲೆ ಉತ್ಸವವು ವಿಜೃಂಭಣೆಯಿಂದ ನೆರವೇರಿತು.



ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಬನಶಂಕರಿದೇವಿಗೆ ಕುಭಾಭಿಷೇಕ ನೆರವೇರಿಸಿದ ಬಳಿಕ ಡೊಳ್ಳುಗಳ ನಿನಾದದೊಂದಿಗೆ ಕಲಶೋತ್ಸವ ಜರುಗಿತು. ಸಂಜೆ ರಥೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆ ಭಕ್ತರ ಜಯಘೋಷಗಳು ಮುಗಿಲು ಮುಟ್ಟಿದವು. ಭಕ್ತರು ಉತ್ತತ್ತಿ ಹಾಗೂ ಬಾಳೆಹಣ್ಣುಗಳನ್ನು ರಥದತ್ತ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು.

ವಿಶೇಷ ಹೂಮಾಲೆಗಳಿಂದ ಅಲಂಕರಿಸಲಾಗಿದ್ದ ರಥೋತ್ಸವವನ್ನು ಕಣ್ತುಂಬಿಕೊಳ್ಳಲು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಾಗೂ ಮಾಳಿಗೆ ಕಟ್ಟಿಗಳ ಮೇಲೆ ಜನಸಾಗರವೇ ನೆರೆದಿತ್ತು. ಮಹಿಳೆಯರು, ಮಕ್ಕಳು, ಯುವಕರು ಹಾಗೂ ವಯೋವೃದ್ಧರು ಸೇರಿದಂತೆ ಸಾವಿರಾರು ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು. ರಥೋತ್ಸವಕ್ಕೂ ಮುನ್ನ ರಥದ ಭವ್ಯ ಕಲಶವನ್ನು ವಾದ್ಯಮೇಳ ಹಾಗೂ ಭಕ್ತರ ಮಂತ್ರಘೋಷಗಳು ಮೆರವಣಿಗೆಯಲ್ಲಿ ತರಲಾಯಿತು. ಮಾರ್ಗದುದ್ದಕ್ಕೂ ಮಹಿಳೆಯರು ಸೇರಿದಂತೆ ಭಕ್ತರು ಕಲಶಕ್ಕೆ ಪೂಜೆ ಸಲ್ಲಿಸಿ ಹೂಮಾಲೆ ಅರ್ಪಿಸಿದರು. ಬಳಿಕ ಕಲಶವನ್ನು ರಥದ ಬಳಿ ತಂದು ಕಲಶಾರೋಹಣ ನೆರವೇರಿಸಲಾಯಿತು. ಇದರೊಂದಿಗೆ ರಥೋತ್ಸವಕ್ಕೆ ಅಧಿಕೃತ ಚಾಲನೆ ದೊರೆಯಿತು. ರಥದ ಹಿಂದೆ ದೇವಿಯ ಪಲ್ಲಕ್ಕಿ ಉತ್ಸವವೂ ನಡೆಯಿತು. ಈ ಸಂದರ್ಭದಲ್ಲಿ ಭಕ್ತರು 'ಶಂಭುಕೋ, ಶಂಭುಕೋ' ಎಂಬ ಘೋಷಣೆಗಳನ್ನು ಮೊಳಗಿಸಿ ಭಕ್ತಿಭಾವ ಮೆರೆದರು. ಒಟ್ಟಾರೆ, ಎರಡು ದಿನಗಳ ಕಾಲ ನಡೆದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಿಡಗುಂದಿ ಪಟ್ಟಣದಲ್ಲಿ ಭಕ್ತಿಯ ವಾತಾವರಣ ನಿರ್ಮಿಸಿದ್ದು, ಬನಶಂಕರಿದೇವಿಯ ಜಾತ್ರಾ ಮಹೋತ್ಸವ ಭಕ್ತರ ಪಾಲಿಗೆ ಸಂಭ್ರಮದ ಕ್ಷಣಗಳಿಗೆ ಸಾಕ್ಷಿಯಾಯಿತು.

ಡಿ.1ರಿಂದ ರಾಜ್ಯಾದ್ಯಂತ ಪಿಡಿಓ ಗಳ ಅಸಹಕಾರ ಚಳವಳಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗ್ರಾಮ ಪಂಚಾಯತಿಗಳ ತೀವ್ರ ಆರ್ಥಿಕ ಸಂಕಷ್ಟ ನಿವಾರಣೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಕಆಔ) ಸೇವಾ ಸಮಸ್ಯೆಗಳ ಪರಿಹಾರ ಹಾಗೂ ಅವೈಜ್ಞಾನಿಕ ಗುರಿ ಮತ್ತು ಆಡಳಿತಾತ್ಮಕ ಒತ್ತಡ ನಿಲ್ಲಿಸುವಂತೆ ಆಗ್ರಹಿಸಿ ಡಿಸೆಂಬರ್ 1 ರಿಂದ 5 ರವರೆಗೆ 5 ದಿನಗಳ ಕಾಲ ರಾಜ್ಯಾದ್ಯಂತ ಅಸಹಕಾರ ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ವಿಜಯಪುರ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ಎಸ್.ಆರ್. ಕಟ್ಟಿ



ಕನಕದಾಸರ ಜಯಂತಿ ಭಕ್ತಿಪೂರ್ವಕ ಆಚರಿಸಿದ ಬಿಜೆಪಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತೀಯ ಜನತಾ ಪಾರ್ಟಿ ವಿಜಯಪುರ ಜಿಲ್ಲಾ ಕಾರ್ಯಾಲಯದಲ್ಲಿ ಸಂತಶ್ರೇಷ್ಠ ಭಕ್ತ ಕನಕದಾಸರ ಜಯಂತಿಯನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನಗಳನ್ನು ಅರ್ಪಿಸಲಾಯಿತು. ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿ ಸಮಾನತೆ, ಭಕ್ತಿ, ಮಾನವೀಯತೆ ಹಾಗೂ ಸಾಮಾಜಿಕ ಸಾಮರಸ್ಯದ ಸಂದೇಶವನ್ನು ಸಾರಿದ್ದಾರೆ. ಅವರ ಆದರ್ಶಗಳು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿವೆ ಎಂದು ಮುಖಂಡರು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಚಂದ್ರಶೇಖರ್ ಕವಟಗಿ ಅವರು ಕನಕದಾಸರ ಜೀವನ ಚರಿತ್ರೆ, ಭಕ್ತಿ ಪರಂಪರೆ, ಸಾಹಿತ್ಯಿಕ ಕೊಡುಗೆ ಹಾಗೂ ಸಮಾಜ ಸುಧಾರಣೆಯಲ್ಲಿ ಅವರ ಪಾತ್ರದ ಕುರಿತು ವಿವರವಾಗಿ ಮಾತನಾಡಿದರು. ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಜಾತಿ–ಮತಗಳ ಭೇದಭಾವವನ್ನು ಮೀರಿ ಸಮಾನತೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾರಿದ ಮಹಾನ್ ಸಂತರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಸಂದೀಪ್ ಪಾಟೀಲ್, ಪಾಪು ಸಿಂಗ್ ರಜಪೂತ್, ಚನ್ನಗುಂಡಿ, ಮಹಾನಗರ ಪಾಲಿಕೆ ಸದಸ್ಯರಾದ ಶಿವರುದ್ರ ಬಾಗಲಕೋಟಿ, ರಾಹುಲ್ ಜಾದವ್, ರಾಜು ಬಿರಾದಾರ್, ಕೃಷ್ಣ ಗೋನಾಳಕರ್, ಬಿಜೆಪಿ ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯ್ ಜೋಶಿ, ಭರತ ಕೋಳಿ ಅಪ್ಪು ಕುಂಬಾರ, ಬಸವರಾಜ್ ದಂದರಗಿ, ಸಂಜು ಬಡಿಗೇರ್, ಸಂತೋಷ್ ಪತ್ತಾರ್, ವಿವೇಕ್ ತಾವರಗೇರಿ, ಸದಾಶಿವ ಪೂಜಾರ್ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಎಬಿವಿ ಶಾಲೆಯಲ್ಲಿ ಭಕ್ತ ಕನಕದಾಸ ಜಯಂತಿ ಆಚರಣೆ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಶ್ರೀ ಸಿದ್ಧೇಶ್ವರ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಬಿವಿ (ಸಿಬಿಎಸ್‌ಇ) ಶಾಲೆಯಲ್ಲಿ ಭಕ್ತ ಕನಕದಾಸ ಜಯಂತಿಯನ್ನು ಭಕ್ತಿಭಾವದಿಂದ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದದವರು ಭಾಗವಹಿಸಿ, ಭಕ್ತ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪನಮನ ಅರ್ಪಿಸಿದರು. ಈ ಸಂದರ್ಭದಲ್ಲಿ ಕನಕದಾಸರ ಜೀವನ, ಅವರ ಭಕ್ತಿ, ಆದರ್ಶಗಳು ಹಾಗೂ ಕನ್ನಡಸಾಹಿತ್ಯಕ್ಕೆಅವರುನೀಡಿದಅಮೂಲ್ಯಕೊಡುಗೆಯನ್ನು ಸ್ಮರಿಸಲಾಯಿತು.ನಂತರ ಕನಕದಾಸರ ಭಕ್ತಿಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಲಾಯಿತು. ಭಕ್ತಿರಸದಿಂದ ಕೂಡಿದ ಗೀತೆಗಳು ಶಾಲಾ ಆವರಣದಲ್ಲಿ ಆಧ್ಯಾತ್ಮಿಕ ವಾತಾವರಣವನ್ನು ಮೂಡಿಸಿದವು.

ಶಿಕ್ಷಕ ವೃಂದದವರ ಸಕ್ರಿಯ ಭಾಗವಹಿಸುವಿಕೆಯಿಂದ ಕನಕದಾಸ ಜಯಂತಿ ಕಾರ್ಯಕ್ರಮವು ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ನೆರವೇರಿತು.

ಭಕ್ತ ಕನಕದಾಸರ ತತ್ವ, ಆದರ್ಶ ಮತ್ತು ಭಕ್ತಿ ಸಂದೇಶಗಳು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳು ಹಾಗೂ ಸಮಾನತೆಯ ಮನೋಭಾವ ಬೆಳೆಸಲಿ ಎಂಬ ಆಶಯದೊಂದಿಗೆ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಂವಿಧಾನ ಪ್ರತಿ ಭಾರತೀಯನ ಆಸ್ತಿ :ಪ್ರೊ.ಲಕ್ಷ್ಣಣನವರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಂವಿಧಾನವು ಯಾವುದೇ ಧರ್ಮ ಅಥವಾ ಜನಾಂಗಕ್ಕೆ ಸೀಮಿತವಾದುದಲ್ಲ. ಅದು ಇಡೀ ಭಾರತೀಯರ ಆಸ್ತಿಯಾಗಿದ್ದು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಬದುಕುವ ಹಕ್ಕು ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸಿದೆ ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್. ಲಕ್ಷ್ಣಣನವರ ಹೇಳಿದರು. ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ನ. 26 ರಂದು ಹಮ್ಮಿಕೊಂಡಿದ್ದ ಭಾರತದ ಸಂವಿಧಾನ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂವಿಧಾನದ ಮಹತ್ವವನ್ನು ಸ್ಮರಿಸಿದ ಅವರು ಭಾರತದಂತ ವಿವಿಧತೆ ನೆಲೆಸಿರುವ ರಾಷ್ಟ್ರದಲ್ಲಿ ಸಮಾಜವನ್ನು ಒಗ್ಗೂಡಿಸುವ ಪ್ರಯತ್ನವನ್ನು ಸಂವಿಧಾನ ಮಾಡುತ್ತದೆ. ವಿದ್ಯಾರ್ಥಿನಿಯರು ಸಂವಿಧಾನವನ್ನು ಅಧ್ಯಯನ ಮಾಡಿ, ಅದರ ಅಂಶಗಳನ್ನು ಜೀವನದಲ್ಲಿ ಅನುಷ್ಠಾನಗೊಳಿಸಿಕೊಳ್ಳಬೇಕು. ಸಮಾಜದ ಪ್ರತಿಯೋರ್ವ ನಾಗರಿಕರು ಒಗ್ಗಟ್ಟಾಗಿ ಶ್ರಮಿಸಿದರೆ ಸಂವಿಧಾನ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪ್ರೊ. ಸಕ್ಪಾಲ್ ಹೂವಣ್ಣ ಮಾತನಾಡಿ, ಸಂವಿಧಾನ ರಚನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೋರಾಟ ಮತ್ತು ಕೊಡುಗೆಗಳನ್ನು ವಿದ್ಯಾರ್ಥಿನಿಯರು ಸ್ಮರಿಸಬೇಕು. ಸಮಾಜದಲ್ಲಿ ಶೋಷಣೆಗೊಳಗಾದವರು, ಮಹಿಳೆಯರು ಹಾಗೂ ನಿರ್ಗತಿಕರ ಸುಸ್ಥಿರ ಬದುಕನ್ನು ಗಮನದಲ್ಲಿಟ್ಟುಕೊಂಡು ಅಂಬೇಡ್ಕರ್ ಅವರು ರೂಪಿಸಿದ ಸಂವಿಧಾನ ಶ್ರೇಷ್ಠವಾದುದು. ಇದು ಪ್ರತಿಯೊಬ್ಬ ಭಾರತೀಯನ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವುದರ ಜತೆಗೆ ಪ್ರತಿಯೊಬ್ಬರಿಗೂ ಕಾನೂನಾತ್ಮಕ ರಕ್ಷಣೆಯನ್ನು ಒದಗಿಸುತ್ತದೆ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಅವರು ಅಪಾರ ಶ್ರಮ ವಹಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಡೀನರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿನಿಯರು ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಸಂದೀಪ್ ನಾಯಕ್ ಸ್ವಾಗತಿಸಿ, ನಿರೂಪಿಸಿದರು. ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಪ್ರೊ. ಹನುಮಂತಯ್ಯ ಪೂಜಾರಿ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ. ಅನಿತಾ ನಾಟಿಕಾರ್ ವಂದಿಸಿದರು.

ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ತಾ.ಪಂ.ಎಇಓ ಅಶೋಕಕುಮಾರ ರಾಠೋಡ ಅಭಿಮತ

ನ್ಯಾಯ, ಸ್ವಾತಂತ್ರ್ಯ, ಸಮಾನತೆ & ಭ್ರಾತೃತ್ವ ಸಂವಿಧಾನದ ಆಶಯಗಳು

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಪಟ್ಟಣದ ತಹಶೀಲ್ದಾರ ಕಛೇರಿ ಆವರಣದಲ್ಲಿ ಮಂಗಳವಾರ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಅಧ್ಯಕ್ಷ ಸ್ಥಾನವಹಿಸಿದ ತಾ.ಪಂ. ಎಇಓ ಅಶೋಕಕುಮಾರ ರಾಠೋಡ ಅವರು ಉದ್ಘಾಟಿಸಿ ಮಾತನಾಡಿದ ಅವರು, "ಸಂವಿಧಾನ ಸರ್ವರ ಆಸ್ತಿ. ನ್ಯಾಯ,ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವವನ್ನು ಕಾಪಾಡಬೇಕಾದರೆ ಸಂವಿಧಾನದ ತತ್ವಗಳನ್ನು ಅನುಸರಿಸಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗುವುದರಲ್ಲಿ ಪ್ರತಿಯೊಬ್ಬರ ಜವಾಬ್ದಾರಿಯೂ ಅತ್ಯಂತ ಮಹತ್ತರ," ಎಂದರು. ಸಂವಿಧಾನ ಎಂಬುದು ಒಂದು ಪುಸ್ತಕ ಅಲ್ಲ ಸಂವಿಧಾನ ಎಂದರೆ ಬಾಬಾಸಾಹೇಬ ಅಂಬೇಡ್ಕರ್ – ಅಂಬೇಡ್ಕರ್ ಎಂದರೆ ಸಂವಿಧಾನ ಆದ್ದರಿಂದ ನಾಗರಿಕರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದುವುದರ ಜತೆಗೆ ಕರ್ತವ್ಯಗಳನ್ನೂ ಜವಾಬ್ದಾರಿಯಿಂದ ನಿರ್ವಹಿಸಬೇಕು. ಸಂವಿಧಾನದ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ. ಸಂವಿಧಾನದ ತತ್ವಗಳನ್ನು ಪಾಲಿಸುವ ಮೂಲಕ ಸಮಾನತೆ, ನ್ಯಾಯ ಮತ್ತು ಸಹಬಾಳ್ವೆಯ ಸಮಾಜ ನಿರ್ಮಾಣ ಸಾಧ್ಯ ಎಂಬ ಸಂದೇಶವನ್ನು ಸಂವಿಧಾನ ದಿನ ಸಾರುತ್ತದೆ."ಭಾರತ ಸಂವಿಧಾನವು ದೇಶದ ಪ್ರತಿಯೊಬ್ಬ ನಾಗರಿಕನನ್ನು ಸಶಕ್ತಗೊಳಿಸಿ, ಸಮಾನತೆ ಹಾಗೂ ಮೂಲಭೂತ ಹಕ್ಕುಕರ್ತವ್ಯಗಳನ್ನು ನೀಡಿದೆ. ನಮ್ಮನ್ನು ರಕ್ಷಿಸುವ ಅತಿ ದೊಡ್ಡ ಕಾನೂನು ಸಂವಿಧಾನವೇ ಆಗಿದೆ ಎಂದರು.

ಉಪನ್ಯಾಸಕ ಶಿವಾನಂದ ಬಿರಾದಾರ ಅವರು ಮಾತನಾಡಿ, ಸಂವಿಧಾನವು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯವಾಗಿದ್ದು, ದೇಶದ ಆಡಳಿತಕ್ಕೆ ಸ್ಪಷ್ಟ ದಿಕ್ಕು ನೀಡುವುದರ ಜತೆಗೆ ಪ್ರತಿಯೊಬ್ಬ ನಾಗರಿಕನ ಹಕ್ಕು ಮತ್ತು ಕರ್ತವ್ಯಗಳನ್ನು ನಿರ್ಧರಿಸುತ್ತದೆ. ನ್ಯಾಯ, ಸ್ವಾತಂತ್ರ, ಸಮಾನತೆ ಹಾಗೂ ಭ್ರಾತೃತ್ವ ಎಂಬ ಮೌಲ್ಯಗಳು ಸಂವಿಧಾನದ ಮೂಲ ಆಶಯಗಳಾಗಿವೆ. ಇವು ದೇಶದ ಏಕತೆ, ಅಖಂಡತೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ದಲಿತ ಮುಖಂಡ ದೇವಾನಂದ ಸಿಂಗೆ ಮಾತನಾಡಿದರು. ಪ.ಪಂ. ಮುಖ್ಯಾಧಿಕಾರಿ ಬಾಬಾಸಾಹೇಬ ತಾವಸೆ,ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ,ತಾ.ಪಂ. ಶಿವದತ್ ಕೊಟ್ಟಲಗಿ, ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ವಿಜಯಕುಮಾರ ಹವಾಲ್ದಾರ,ಸಿಡಿಪಿಓ ಸಾಹೇಬಗೌಡ ಜುಂಜರವಾಡ,ಬಿಇಓ ಸಿಬ್ಬಂದಿ,ಚಡಚಣ ಸಿಪಿಆಯ್ ಪರಶುರಾಮ ಮನಗೂಳಿ,ಪಿಎಸ್‌ಐ ಅರವಿಂದ ಅಂಗಡಿ, ಪಿಎಸ್‌ಐ ಅಪರಾಧ ವಿಭಾಗ ಚಡಚಣ ಎನ್.ಜಿ.ಅಪನಾಯ್ಕರ, ಡಾ.ಸತೀಶಕುಮಾರ ಮದಭಾವಿ, ಮುರುಗೇಶ ಸಿಂಪಿ, ಕಂದಾಯ ನೀರಿಕ್ಷಕ, ಶಿರಸ್ತೇದಾರ ಆರ್.ಎಸ್.ಚವ್ಹಾಣ, ಆಹಾರ ನಿರೀಕ್ಷಕ ಶಿವಾನಂದ ಕೋಳಿ, ದಶರಥ ಬನಸೋಡೆ, ದೇವಾನಂದ ಸಿಂಗೆ, ಸೋಮು ಬಡಿಗೇರ, ರುದ್ರೇಶ ಬನಸೋಡೆ, ಸಿದ್ದಲಿಂಗ ಬನಸೋಡೆ, ಸತೀಶ ಬಗಲಿ, ಬಿ.ಕೆ.ವಾಘಮೋರೆ, ಸೈದು ಕೊಡಹೊನ್ನ,ಕಲ್ಮೇಶ ವಾಘಮೋರೆ ಸೇರಿದಂತೆ ವಿವಿಧ ಸಂಘಟನೆಯ ಗಣ್ಯರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಅಬಕಾರಿ ಹಾಗೂ ಪೋಲಿಸ್ ಇಲಾಖೆ ಸೇರಿದಂತೆ ತಾಲೂಕ ಮಟ್ಟದ ವಿವಿಧ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು

ಸಂವಿಧಾನ ನಾಗರಿಕ ಹಕ್ಕುಗಳಿಗೆ ಭದ್ರತೆ ಬುನಾದಿ :ಪೂಜಾರಿ

■ ಉದಯರಶ್ಮಿ ದಿನಪತ್ರಿಕೆ


ಚಡಚಣ: ಸಂವಿಧಾನ ನಾಗರಿಕ ಹಕ್ಕುಗಳಿಗೆ ಭದ್ರತೆ ಬುನಾದಿ ಪ್ರಜಾಪ್ರಭುತ್ವದ ಜೀವಾಳ ಎಂದು ಭಾರತೀಯ ಸುರಾಜ್ಯ ಸಂಸ್ಥೆ ಅಧ್ಯಕ್ಷರು ಹಾಗೂ ನಿವೃತ್ತಿ ಶಿಕ್ಷಕ ಬಿ.ಬಿ. ಪೂಜಾರಿ ಹೇಳಿದರು.

ಸಮೀಪದ ಅರ್ಜನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಸಂವಿಧಾನ ದಿನಾಚರಣೆ ಹಾಗೂ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆ ಕ್ರಿಯಾಯೋಜನೆ ಉದ್ಘಾಟಿಸಿ ಮಾತನಾಡಿದ ಅವರು

ದೇಶವನ್ನು ಪ್ರಗತಿ ಏಕತೆ ಮತ್ತು ಸಮಗ್ರತೆಯತ್ತ ಮುನ್ನಡೆಸುವುದು ನಾವೆಲ್ಲರೂ ಸಂವಿಧಾನ ವನ್ನು ನಿಷ್ಠೆಯಿಂದ ಪಾಲಿಸಬೇಕು ಎಂದರು. ಭಾರತೀಯ ಸುರಾಜ ಸಂಸ್ಥೆಯ ವತಿಯಿಂದ ಶಾಲಾ ಮಕ್ಕಳಿಗೆ ಕೇವಲ ಸಹಾಯ ಮಾಡುವುದಲ್ಲ, ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವುದು. ಗ್ರಾಮೀಣ ಭಾಗದ ಮಕ್ಕಳೂ ಉತ್ತಮ ಅಂಕ ಪಡೆದು ಉನ್ನತ ಸಾಧನೆ ಮಾಡಬೇಕು ಎಂಬುದೇ ನಮ್ಮ ಆಶಯ. ಶಾಲೆಯೊಂದಿಗೆ ನಿರಂತರವಾಗಿ ಸಹಕರಿಸಿ ಮಕ್ಕಳಿಗೆ ಮಾರ್ಗದರ್ಶನ, ಅಧ್ಯಯನ ಸಾಮಗ್ರಿ ಹಾಗೂ ಪ್ರೋತ್ಸಾಹ ನೀಡುತ್ತೇವೆ ಎಂದರು.

ಶಾಲಾ ಮುಖ್ಯ ಗುರು ಪ್ರಭು ಬಿರಾದಾರ ಮಾತನಾಡಿ, "ಸಂವಿಧಾನ ನಮಗೆ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಕಲಿಸುತ್ತದೆ. ಮಕ್ಕಳ ದಿನಾಚರಣೆ ಎಂದರೆ ಮಕ್ಕಳ ಕನಸುಗಳಿಗೆ ಗೌರವ ಕೊಡುವುದು. ಈ ಕ್ರಿಯಾಯೋಜನೆಯಿಂದ ಎಸ್.ಎಸ್.ಎಲ್.ಸಿ ಮಕ್ಕಳಿಗೆ ಯೋಜನಾಬದ್ಧ ಅಧ್ಯಯನ, ಪರೀಕ್ಷಾ ಭಯ ನಿವಾರಣೆ ಹಾಗೂ ಉತ್ತಮ ಫಲಿತಾಂಶ ಪಡೆಯಲು ಸಹಕಾರಿಯಾಗಲಿದೆ" ಎಂದರು.

ಸಹ ಶಿಕ್ಷಕರಾದ ಡಿ .ಕೆ. ರಗಟಿ ಮಾತನಾಡಿ ಪ್ರತಿ ವಿದ್ಯಾರ್ಥಿಯ ಕಲಿಕಾ ಮಟ್ಟವನ್ನು ಗುರುತಿಸಿ, ಕಠಿಣ ವಿಷಯಗಳಿಗೆ ವಿಶೇಷ ತರಗತಿ, ವಾರದ ಪರೀಕ್ಷೆ, ಹಿಂದಿನ ಪ್ರಶ್ನೆ ಪತ್ರಿಕೆಗಳ ಅಭ್ಯಾಸ ಹಾಗೂ ವೈಯಕ್ತಿಕ ಮಾರ್ಗದರ್ಶನ ನೀಡಲಾಗುವುದು ಎಂದು ಕ್ರಿಯಾಯೋಜನೆಯನ್ನು ವಿವರಿಸಿ ಹೇಳಿದರು.ಈ ಸಂದರ್ಭದಲ್ಲಿ. ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶರಣಪ್ಪ ಬೂದಿಹಾಳ, ಎಂ. ಎಸ್. ರಾಮಪೂರ, ಪಿ.ಬಿ. ಹಿರೋಡಗಿ, ಎಂ ಎಸ್ ಕಾಗರ, ಚಿದಾನಂದ ಮೇತ್ರಿ, ಮಾಳಪ್ಪ ಹುಲಜಂತಿ, ಗಣಪತಿ ಗೋಡೆಕರ, ದಶವಂತ ಮೇತ್ರಿ, ಗ್ರಾ.ಪಂ ಸದಸ್ಯರು, ಪಾಲಕರು, ಗ್ರಾಮಸ್ಥರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಏಡ್ಸ್ ಜಾಗೃತಿಯೇ ಸುರಕ್ಷಿತ ಭವಿಷ್ಯದ ಅಡಿಪಾಯ

■ ಉದಯರಶ್ಮಿ ದಿನಪತ್ರಿಕೆ



ಆರೋಗ್ಯ ಅಂಗಳ
ಆರೋಗ್ಯ ಸಂಬಂಧಿತ ಲೇಖನ

ಯುವಜನತೆ ದೇಶದ ಭವಿಷ್ಯದ ಶಕ್ತಿ ದೇಶದ ಅಭಿವೃದ್ಧಿ ಸಾಮಾಜಿಕ ಬದಲಾವಣೆ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಯುವಜನರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದರೇ ಇಂದಿನ ಯುವಜನರು ಎದುರಿಸುತ್ತಿರುವ ಪ್ರಮುಖ ಆರೋಗ್ಯ ಸವಾಲುಗಳಲ್ಲಿ ಹೆಚ್.ಐ.ವಿ/ಏಡ್ಸ್ ಕೂಡಾ ಒಂದಾಗಿದೆ ಇದರ ಕುರಿತು ಸರಿಯಾದ ಮಾಹಿತಿ, ಅರಿವು ಮತ್ತು ಜವಬ್ದಾರಿಯುತ ನಡವಳಿಕೆ ಇಲ್ಲದಿರುವುದು, ಆತುರತೆ ಸಮೂಹಗಳ ಪ್ರಭಾವ ಕುಟುಂಬದ ನಿರ್ಲಕ್ಷತೆ, ಸೋಷಿಯಲ್ ಮೀಡಿಯಾದ ಪ್ರಭಾವ ಮತ್ತು ವೈಜ್ಞಾನಿಕ ಮಾಹಿತಿ ಇಲ್ಲದೇ ಇರುವುದು ಇವೆಲ್ಲಾ ಅಂಶಗಳು ಸೊಂಕು ಹರಡುವ ಅಪಾಯವನ್ನು ಹೆಚ್ಚಿಸಬಹುದು.

ಯುವಜನತೆ ಏಕೆ ಹೆಚ್ಚು ಜಾಗೃತರಾಗಬೇಕೆಂದರೇ, ಯೌವನಾವಸ್ಥೆಯ ಹೊಸ್ಥಿಲಲ್ಲಿ ಹೊಸ ಅನುಭವಗಳು, ಆಕರ್ಷಣೆಗಳು ಕುತೂಹಲಗಳು ಮತ್ತು ದುಡುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತವಾಗಿದೆ. ಈ ಸಂಧರ್ಭದಲ್ಲಿ ಯುವಜನತೆ ಸ್ನೇಹಿತರ ಒತ್ತಡ, ತಪ್ಪುತಿಳುವಳಿಕೆ, ಮಾದಕ ವಸ್ತುಗಳ ಬಳಕೆ, ಅಸುರಕ್ಷೀತ ಲೈಂಗಿಕ ನಡುವಳಿಕೆ ಹಾಗೂ ಸಾಮಾಜಿಕ ಜಾಲ ತಾಣಗಳ ಮೂಲಕ ಹರಡುವ ತಪ್ಪು ಕಲ್ಪನೆಗಳು ಇವರ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಯುವಜನರು ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಆದರಿಂದ ಆಗುವ ದುಷ್ಪರಿಣಾಮಗಳನ್ನು ಅರಿತುಕೊಳ್ಳಬೇಕು. ದುಡುಕಿನ ನಿರ್ಧಾರ ತೆಗೆದುಕೊಂಡು ಕ್ಷಣಿಕ ಸುಖಗೊಸ್ಕರ ತಮ್ಮ ಜೀವನವನ್ನು ಬಲಿಕೊಡಬಾರದು. ಇದರ ಜೊತೆಗೆ ಲೈಂಗೀಕ ವಿಷಯಗಳು ಹಾಗೂ ಆರೋಗ್ಯದ ಬಗ್ಗೆ ಮುಕ್ತವಾಗಿ ಮಾತನಾಡುವುದು ವೈಜ್ಞಾನಿಕ ಮಾಹಿತಿಯನ್ನು ತಿಳಿದುಕೊಳ್ಳುವುದು ಮತ್ತು ಆಗತ್ಯವಿದ್ದಾಗ ಆರೋಗ್ಯ ಕಾರ್ಯಕರ್ತರ ಸಲಹೆಯನ್ನು ಪಡೆದುಕೊಳ್ಳಬೇಕು.

ಯುವಜನತೆ ಹೆಚ್.ಐ.ವಿ/ಏಡ್ಸ್ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳಲ್ಲಿ ಮುಖ್ಯವಾಗಿ ಹೆಚ್.ಐ.ವಿ ಕುರಿತು ವೈಜ್ಞಾನಿಕ ಮತ್ತು ಸರಿಯಾದ ಮಾಹಿತಿಯನ್ನು ತಿಳಿದುಕೊಳ್ಳಬೇಕು, ಲೈಂಗೀಕ ಸಂಪರ್ಕದಲ್ಲಿ ಪ್ರತಿಬಾರಿಯೂ ಸರಿಯಾಗಿ ಕಾಂಡೋಮ್ ಬಳಸಬೇಕು, ಅಗತ್ಯವಿದ್ದಾಗ ಹೆಚ್.ಐ.ವಿ ಪರೀಕ್ಷೆ ಮಾಡಿಸಿಕೊಳ್ಳಬೇಕು, ಇತರರು ಬಳಸಿದ ಸೂಜಿ ಸಿರೆಂಜಗಳನ್ನು ಬಳಸಬಾರದು, ರಕ್ತವರ್ಗಾವಣೆ ಸುರಕ್ಷಿತವಾಗಿ ಟೆಸ್ಟ ಮಾಡಿದ ರಕ್ತವನ್ನೇ ಬಳಸಬೇಕು ಹಾಗೂ ಮಾದಕ ವಸ್



'ಎಸಿಪಿ ದುರ್ಗಾ' ಚಲನಚಿತ್ರದ ಪೋಸ್ಟರ್ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ

ಕಲಬುರಗಿ: ಎನ್ಎಂಆರ್ ಮೂವಿ ಮೇಕರ್ಸ್ ಲಾಂಛನದಡಿ ಮಂಜು ಹೆಜ್ಜಾಲ ಅವರು ನಿರ್ಮಿಸಿ. ಎಂಎಸ್ ರವೀಂದ್ರ ಅವರ ನಿರ್ದೇಶನದ "ಎಸಿಪಿ ದುರ್ಗಾ" ಕನ್ನಡ ಚಲನಚಿತ್ರದ ಪೋಸ್ಟರ್ ಬಿಡುಗಡೆ ಸಮಾರಂಭ ಶುಕ್ರವಾರ ನಗರದ ಪತ್ರಿಕಾಭವನದಲ್ಲಿ ನಡೆಯಿತು.ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ಎಂಎಸ್ ರವೀಂದ್ರ ಅವರು ಚಿತ್ರದ ನಿರ್ಮಾಣದ ಬಗ್ಗೆ ಮಾಹಿತಿ ಹಂಚಿಕೊಂಡರು.

ಸುಮಾರು 2–3ಕೋಟಿ ವೆಚ್ಚದ "ಎಸಿಪಿ ದುರ್ಗಾ" ಚಲನಚಿತ್ರವು 2027 ರ ಜೂನ್ ತಿಂಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ. ಗ್ರಾಮೀಣ ಪರಿಸರದ ಚಿತ್ರಕತೆ ಹೊಂದಿರುವ ಈ ಚಲನಚಿತ್ರವು ಎಲ್ಲ ವರ್ಗದ ಪ್ರೇಕ್ಷಕರನ್ನು ತಲುಪುವ ವಿಶ್ವಾಸವಿದೆ.

ಕಲಬುರಗಿ ಭಾಗದ ಉತ್ತರ ಕರ್ನಾಟಕ ಸೇರಿದಂತೆ ಪ್ರತಿಭಾವಂತ ಕಲಾವಿದರಿಗೆ ಅವಕಾಶ ನೀಡಲು ಚಿತ್ರತಂಡ ತೀರ್ಮಾನ ಕೈಗೊಂಡಿದೆ. ವಿಶೇಷವಾಗಿ ಈ ಚಲನ ಚಿತ್ರದಲ್ಲಿ ಕಲಬುರಗಿ ಜಿಲ್ಲೆ ಯಡ್ರಾಮಿಯ ಯುವಸಾಹಿತಿ, ಕಲಾವಿದ ಡಾ. ಮಲ್ಲಿಕಾರ್ಜುನ ಆಲಮೇಲ ಅವರು ಖಳನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎಸಿಪಿಯಾಗಿ ಸುಗುಣಾ, ಎರಡನೇ ನಾಯಕಿಯಾಗಿ ದಿವ್ಯಾ ಮತ್ತು ಕಮಿಷನರ್ ಪಾತ್ರದಲ್ಲಿ ಕಾಡಯ್ಯ ಹಿರೇಮಠ ಸ್ವಾಮೀಜಿ, ಎಂಎಲ್ಎ ಆಗಿ ಸೂಗೂರಯ್ಯಸ್ವಾಮಿ ಅವರು ಸೇರಿದಂತೆ ಶೇ 50 ಹೊಸ ಕಲಾವಿದರು, ಶೇ 50 ಹಳೆಯ ಕಲಾವಿದರು ತೆರೆಯ ಮೇಲೆ ಕಾಣಿಸಿಕೊಂಡಿದ್ದಾರೆ. ಕಲಬುರಗಿಯ ಕಲಾಭಿಮಾನಿಗಳ ಆಶೀರ್ವಾದ ಪಡೆದು ಚಿತ್ರೀಕರಣ ಆರಂಭಿಸಲಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಜು ಹೆಜ್ಜಾಲ ಡಾ. ಮಲ್ಲಿಕಾರ್ಜುನ ಆಲಮೇಲ ಯಡ್ರಾಮಿ,ಕಾಡಯ್ಯ ಹಿರೇಮಠ ಸ್ವಾಮೀಜಿ,ಸುಗುಣ, ದಿವ್ಯಾ,ಆಶಾ, ಸೂಗೂರಯ್ಯಸ್ವಾಮೀ ವಿನೋದ, ಮಲ್ಲಿಕಾರ್ಜುನ ನೀಲೂರ, ನಿಜಾಮ್ ಅತನೂರ್, ಅನಿಲ್ ಗುತ್ತೇದಾರ್, ಮಲ್ಲು ಹೊಸಮನಿ, ಅವರು ಸೇರಿದಂತೆ ಹಲವರಿದ್ದರು.



ಕಾಯಕ ಆತ್ಮಸಾಕ್ಷಾತ್ಕಾರದ ಮೂಲ :ಡಾ.ಸುಮಾ ಬೋಳರಡ್ಡಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಾಯಕ ಕುರಿತು ವಚನಗಳನ್ನು ರಚಿಸಿ ಆಚರಿಸಿ ,ಅದರ ಅರ್ಥ ವೈಶಾಲ್ಯತೆ ಮತ್ತು ಪಾವಿತ್ರ್ಯತೆಯನ್ನು ಲೋಕಕ್ಕೆ ತೋರಿಸಿಕೊಟ್ಟವರು ಶರಣೆ ಆಯ್ದಕ್ಕಿ ಲಕ್ಕಮ್ಮನವರು. "ಕಾಯಕ ನಿಂದಿತ್ತು ಏಳಯ್ಯ ಎನ್ನಾಳ್ದನೆ"– ಎಂದು ಗಂಡ ಮಾರಯ್ಯನನ್ನು ಎಚ್ಚರಿಸಿ ಕಾಯಕ ಮಾಡಲು ಹಚ್ಚಿ ಅದರ ಮಹತ್ವವನ್ನು ಲಕ್ಕಮ್ಮ ಸಾರಿ ಹೇಳಿದರು. ಸತ್ಯ ಶುದ್ಧ ಕಾಯಕದಿಂದ ದಾಸೋಹ, ಪ್ರಸಾದ, ಅನುಭವಗಳು ಅಳವಟ್ಟು ಆತ್ಮ ಸಾಕ್ಷಾತ್ಕಾರ ವಾಗುವುದೆಂದು ಡಾ. ಸುಮಾ ಬೋಳರಡ್ಡಿ ಹೇಳಿದರು.

ಅವರು ನಗರದ ಶ್ರೀಮತಿ ವಿದ್ಯಾ ಕೋಟಿಣ್ಣವರ ಅವರ ಮನೆಯಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ದತ್ತಿ ಸಮಾರಂಭದಲ್ಲಿ "ಶರಣೆ ಆಯ್ದಕ್ಕಿ ಲಕ್ಕಮ್ಮ" ರನ್ನು ಕುರಿತು ಉಪನ್ಯಾಸ ನೀಡಿ ಮಾತನಾಡಿದರು.

ಶ್ರೀಮತಿ ಶಿವಲೀಲಾ ಮುರಾಳ ಅವರು "ಜನಪದ ಸಾಹಿತ್ಯದಲ್ಲಿ ಶರಣರು" ಎಂಬ ವಿಷಯ ಕುರಿತು ಮಾತನಾಡಿ, ಶಿವಶರಣ ರನ್ನು ಸ್ಮರಿಸಿಕೊಂಡರೆ ನಮ್ಮ ಬದುಕು ಬಂಗಾರವಾಗುತ್ತದೆ. ಮಹಿಳೆಯರು ಬಂಗಾರದ ಸರಗಿಯನ್ನು ಧರಿಸಿ ಹೆಳಲಿಗೆ ಘಮಘಮಿಸುವ ಮಲ್ಲಿಗೆ ಮಾಲೆಯನ್ನು ಮುಡಿದಾಗ ಸಂತೋಷವಾಗುವಂತೆ ಶರಣರ ವಚನಗಳನ್ನು ಓದಿ ಅರಗಿಸಿಕೊಂಡಾಗ ಅಂತರಂಗದಲ್ಲಿ ಅರಿವುಮೂಡಿ ಪರಮಾನಂದ ಪ್ರಾಪ್ತವಾಗುತ್ತದೆ ಎಂದು ಹೇಳಿದರು.

ಲಿಂ.ಕೋರವಾರದ ಶಂಕರಗೌಡರು, ಲಿಂ.ಗುರುಸಂಗವ್ವ ಇಂಗಳೇಶ್ವರ, ಮತ್ತು ಲಿಂ.ಶರಣಪ್ಪ ಮಂಗಾನವರ ಅವರ ಸ್ಮರಣೆಗಾಗಿ ಹಮ್ಮಿಕೊಂಡಿದ್ದ ದತ್ತಿ ಸಮಾರಂಭದ ಅಧ್ಯಕ್ಷತೆಯನ್ನು ಡಾ. ರೇಣುಕಾ ಬಸವಪ್ರಭು ವಹಿಸಿಕೊಂಡಿದ್ದರು.

ಜಿಲ್ಲಾ ಕದಳಿ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಶಾರದಾ ಐಹೊಳ್ಳಿ ಸ್ವಾಗತ ಕೋರಿದರು. ಪರಿಷತ್ತಿನ ಅಧ್ಯಕ್ಷ ಜಂಬುನಾಥ ಕಂಚ್ಯಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಸುಜಾತ ಸಕ್ರಿ ವಂದಿಸಿದರು.ಸಭೆಯಲ್ಲಿ ಮ.ಗು.ಯಾದವಾಡ, ಶೈಲಿ ಪಾಟೀಲ,ಈರಣ್ಣ ತೊಂಡಿಕಟ್ಟಿ, ಎನ್. ಆರ್. ಕುಲಕರ್ಣಿ, ಪುಷ್ಪಾ ಮಹಾಂತಮಠ, ಶೈಲಜಾ ಮೋದಿ, ಮಹಾಂತೇಶ ಬಿರಾದಾರ, ಮದಭಾವಿ ಮುಂತಾದವರು ಉಪಸ್ಥಿತರಿದ್ದರು.


ನೂರೊಂದು ನೆನಪು ಎದೆಯಾಳದಿಂದ..

■ ಉದಯರಶ್ಮಿ ದಿನಪತ್ರಿಕೆ



ನನ್ನ ಪ್ರೀತಿಯ ಅಂಜಲಿ,

ನಮ್ಮಿಬ್ಬರ ಬದುಕಿನ ಈ ಸುಂದರ ಪಯಣಕ್ಕೆ ಇಂದಿಗೆ ಮತ್ತೊಂದು ವರ್ಷ ತುಂಬಿದೆ ಎಂಬುದನ್ನು ನೆನೆದರೆ ಮನಸ್ಸು ಭಾವುಕವಾಗುತ್ತದೆ, ಹೃದಯ ಆನಂದದಿಂದ ತುಂಬಿ ಬರುತ್ತದೆ. ಕಾಲಚಕ್ರ ಉರುಳಿದರೂ ಕರಗದ ನಮ್ಮಿಬ್ಬರ ಪ್ರೇಮ ಪಯಣಕ್ಕೆ ಮತ್ತೊಂದು ವರ್ಷದ ಸಂಭ್ರಮವನ್ನು ಆಚರಿಸುತ್ತಿರುವ ಈ ಕ್ಷಣ ನನ್ನ ಜೀವನದ ಅತ್ಯಂತ ಸಾರ್ಥಕ ಘಳಿಗೆ. ನಿನ್ನೆ ಮೊನ್ನೆ ಭೇಟಿಯಾದಂತೆ ಭಾಸವಾಗುವ ನಮ್ಮಿಬ್ಬರ ಪ್ರೇಮಕಥೆ, ಇಂದು ಇಷ್ಟು ದೂರ ಸಾಗಿ ಬಂದಿರುವುದು ನನ್ನ ಬದುಕಿನ ಅತ್ಯಂತ ದೊಡ್ಡ ಸಂತಸ. ಹಳೆಯ ವೈನಿನಂತೆ ನಮ್ಮ ಪ್ರೀತಿ ದಿನದಿಂದ ದಿನಕ್ಕೆ ಮತ್ತಷ್ಟು ಗಾಢವಾಗುತ್ತಲೇ ಇದೆ, ಮತ್ತಷ್ಟು ಮಧುರವಾಗುತ್ತಲೇ ಇದೆ. ಈ ವಿಶೇಷ ದಿನದಂದು ನನ್ನ ಮನಸ್ಸಿನ ಆಳದಲ್ಲಿರುವ ಪ್ರತಿಯೊಂದು ಪ್ರಣಯದ ಭಾವನೆಯನ್ನೂ ಪದಗಳಲ್ಲಿ



ಹಿಡಿದಿಟ್ಟು ನಿನಗೆ ಅರ್ಪಿಸಬೇಕೆಂದು ಈ ಪತ್ರವನ್ನು ಬರೆಯುತ್ತಿದ್ದೇನೆ.

ನೀನು ನನ್ನ ಜೀವನಕ್ಕೆ ಬರುವ ಮುನ್ನ, ನನ್ನ ಬದುಕು ಕೇವಲ ಯಾಂತ್ರಿಕವಾಗಿ ಸಾಗುತ್ತಿದ್ದ ಒಂದು ದಾರಿಯಾಗಿತ್ತು; ಅಲ್ಲಿ ಕೇವಲ ದಿನಚರಿಯ ಕರ್ತವ್ಯಗಳಿದ್ದವೇ ಹೊರತು ನಿಜವಾದ ಜೀವಂತಿಕೆಇರಲಿಲ್ಲ.ನನ್ನಮನಸ್ಸುಮರುಭೂಮಿಯಂತೆ ಬರಡಾಗಿತ್ತು, ಭಾವನೆಗಳು ಕಲ್ಲಾಗಿ ಹೋಗಿದ್ದವು. ಆದರೆ, ಬರಡು ಭೂಮಿಗೆ ಮುಂಗಾರಿನ ಮೊದಲ ಮಳೆ ಬಿದ್ದಂತೆ ನೀನು ನನ್ನ ಬಾಳಿಗೆ ಬಂದೆ; ನನ್ನ ಜೀವನದ ಪ್ರತಿಯೊಂದು ಮೂಲೆಯಲ್ಲೂ ಹೊಸ ಚಿಗುರು ಮೂಡುವಂತೆ ಮಾಡಿದೆ. ಸುಡುವ ಬೇಸಿಗೆಯ ಬಿಸಿಲಿಗೆ ತಂಪಾದ ಗಾಳಿ ಬೀಸಿದಂತೆ, ನನ್ನ ಜೀವನದ ಎಲ್ಲಾ ಒತ್ತಡಗಳು ಮತ್ತು ಆಯಾಸಗಳ ನಡುವೆ ನಿನ್ನ ಒಂದೇ ಒಂದು ಮುಗುಳ್ನಗು ನನಗೆ ಅಪಾರ ನೆಮ್ಮದಿ ನೀಡುತ್ತದೆ. ನಿನ್ನ ಕಣ್ಣುಗಳಲ್ಲಿರುವ ಆ ಮುಗ್ಧ ಪ್ರೀತಿ ನನ್ನೆಲ್ಲಾ ನೋವುಗಳನ್ನು ಕ್ಷಣಾರ್ಧದಲ್ಲಿ ಮರೆಸಿಬಿಡುತ್ತದೆ.

ನಮ್ಮಿಬ್ಬರ ಮೊದಲ ಭೇಟಿಯ ಆ ದಿನ ನನಗೆ ಈಗಲೂ ನಿನ್ನೆ ನಡೆದಂತೆ ನೆನಪಿದೆ. ನೀನು ಮೊದಲ ಬಾರಿ ನನ್ನೆದುರು ನಿಂತು ನಕ್ಕಾಗ, ನನ್ನ ಹೃದಯದ ಬಡಿತ ಒಂದು ಕ್ಷಣ ನಿಂತು ಮತ್ತೆ ವೇಗವಾಗಿ ಬಡಿಯಲಾರಂಭಿಸಿತ್ತು. ಅಂದಿನಿಂದ ಇಂದಿನವರೆಗೂ ನಾನು ನಿನ್ನ ಪ್ರೀತಿಯಲ್ಲಿ ಪ್ರತಿಕ್ಷಣವೂ ಹೊಸದಾಗಿ ಬೀಳುತ್ತಲೇ ಇದ್ದೇನೆ. ನಮ್ಮಿಬ್ಬರ ಆ ಏಕಾಂತದ ಕ್ಷಣಗಳನ್ನು ನೆನೆದಾಗಲೆಲ್ಲಾ ಈಗಲೂ ನನ್ನ ಮೈಯಲ್ಲಿ ವಿದ್ಯುತ್ ಸಂಚಾರವಾದಂತೆ ರೋಮಾಂಚನವಾಗುತ್ತದೆ. ಜೋರಾಗಿ ಸುರಿಯುವ ಮಳೆಯ ಸಂಜೆಯಲ್ಲಿ, ಕಿಟಕಿಯ ಪಕ್ಕ ಕುಳಿತು ಬಿಸಿ ಕಾಫಿ ಹೀರುತ್ತಾ ನಿನ್ನ ಕೈಯನ್ನು ನನ್ನ ಕೈಯಲ್ಲಿ ಹಿಡಿದುಕೊಂಡ ಆ ಕ್ಷಣ ನನಗೆಂದಿಗೂ ಮರೆಯಲಾಗದು.

ಚಳಿಯ ಆ ರಾತ್ರಿಯಲ್ಲಿ ನೀನು ನನ್ನ ಭುಜಕ್ಕೆ ತಲೆಯೊರಗಿ, ನಿನ್ನ ಉಸಿರಿನ ಬಿಸಿಯನ್ನು ನನ್ನ ಕುತ್ತಿಗೆಗೆ ತಾಗಿಸುತ್ತಾ ಮಲಗಿದ್ದ ಆ ದೃಶ್ಯ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಿನ್ನ ಆ ರೇಷ್ಮೆಯಂತಹ ಮುಂಗುರುಳು ನನ್ನ ಮುಖಕ್ಕೆ ತಾಗಿದಾಗ, ಇಡೀ ಪ್ರಪಂಚವೇ ಒಂದು ಕ್ಷಣ ಸ್ತಬ್ಧವಾದಂತೆ ಭಾಸವಾಗಿತ್ತು. ಹುಣ್ಣಿಮೆಯ ರಾತ್ರಿಯಲ್ಲಿ ತಣ್ಣನೆಯ ಬೆಳದಿಂಗಳ ಕೆಳಗೆ, ಯಾರೂ ಇಲ್ಲದ ದಾರಿಯಲ್ಲಿ ನಿನ್ನ ಸೊಂಟದ ಮೇಲೆ ಕೈಯಿಟ್ಟು ನಿನ್ನನ್ನು ನನ್ನೆಡೆಗೆ ಸೆಳೆದುಕೊಂಡ ಆ ಮಧುರ ಕ್ಷಣ ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿದಿದೆ. ನಿನ್ನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದಾಗ, ಆ ಕಣ್ಣುಗಳಲ್ಲಿ ಕಾಣುವ ನನ್ನದೇ ಪ್ರತಿಬಿಂಬ ಮತ್ತು ನಿನ್ನ ತುಟಿಗಳ ಮೇಲಿನ ಆ ನಾಚಿಕೆಯ ನಗು ನನ್ನನ್ನು ಮಂತ್ರಮುಗ್ಧನನ್ನಾಗಿಸುತ್ತದೆ.



ನಿನ್ನ ಹಣೆಗೆ ನಾನು ನೀಡಿದ ಮೊದಲ ಮುತ್ತಿನ ಆ ಕಂಪನ, ನಿನ್ನ ಬೆಚ್ಚಗಿನ ಅಪ್ಪುಗೆಯಲ್ಲಿ ನಾನು ಕಳೆದುಹೋದ ಆ ರಾತ್ರಿಗಳು ನನ್ನ ಬದುಕಿನ ಅತ್ಯಂತ ರೋಮ್ಯಾಂಟಿಕ್ ಅಧ್ಯಾಯಗಳು. ಸಾಗರದ ಅಲೆಗಳು ದಡವನ್ನು ಮತ್ತೆ ಮತ್ತೆ ಬಂದು ತಬ್ಬಿಕೊಳ್ಳುವಂತೆ, ನನ್ನ ಮನಸ್ಸು ಮತ್ತು ದೇಹ ಸದಾ ನಿನ್ನ ಆ ಸಾಮೀಪ್ಯವನ್ನೇ ಹಂಬಲಿಸುತ್ತಿರುತ್ತದೆ. ನಿನ್ನ ಮೈಯ ಆ ಸುವಾಸನೆ, ನಿನ್ನ ಧ್ವನಿಯ ಆ ಮಧುರ ಇಂಪು ನನ್ನ ನರನಾಡಿಗಳಲ್ಲಿ ಬೆರೆತುಹೋಗಿದೆ. ನೀನು ನನ್ನ ಪಕ್ಕದಲ್ಲಿದ್ದರೆ ನನಗೆ ಇಡೀ ಜಗತ್ತನ್ನೇ ಗೆದ್ದಂತಹ ಅನುಭವವಾಗುತ್ತದೆ, ನನ್ನೆಲ್ಲಾ ಆಯಾಸಗಳು ಮಾಯವಾಗಿ ಹೊಸ ಚೈತನ್ಯ ತುಂಬಿಕೊಳ್ಳುತ್ತದೆ.

ಬದುಕಿನ ಏರಿಳಿತಗಳೆಂಬ ಬಿರುಗಾಳಿಯಲ್ಲಿಯೂ ನಾವು ಜೊತೆಯಾಗಿ ಸಾಗಿದ್ದೇವೆ. ಜೀವನದ ಹಾದಿ ಕಠಿಣವಾದಾಗ, ಎಷ್ಟೋ ಬಾರಿ ನಾನು ಸೋತು ಕುಳಿತಾಗ, ಕತ್ತಲೆಯ ಹಾದಿಯಲ್ಲಿ ದಾರಿ ತೋರುವ ಪುಟ್ಟ ಹಣತೆಯಂತೆ ನೀನು ನನ್ನ ಪಕ್ಕದಲ್ಲೇ ನಿಂತು ಧೈರ್ಯ ತುಂಬಿದ್ದೀಯ. ನನ್ನ ಕಣ್ಣುಗಳಲ್ಲಿ ನೀರು ತುಂಬಿದಾಗಲೆಲ್ಲಾ, ನಿನ್ನ ಪ್ರೀತಿಯ ಮಾತುಗಳು ಮತ್ತು ನಿನ್ನ ಆತ್ಮೀಯ ಅಪ್ಪುಗೆ ನನಗೆ ಅಪಾರ ಸಾಂತ್ವನ ನೀಡಿವೆ. ಹೂವಿಗೆ ಪರಿಮಳ ಹೇಗೆ ಜೀವವೋ, ಕಡಲಿಗೆ ಅಲೆಗಳು ಹೇಗೆ ಅಲಂಕಾರವೋ, ಹಾಗೆಯೇ ನನ್ನ ಈ ಬದುಕಿಗೆ ನಿನ್ನ ಪ್ರೀತಿಯೇ ನಿಜವಾದ ಉಸಿರು. ನಿನ್ನೊಂದಿಗೆ ಕಳೆದ ಪ್ರತಿಯೊಂದು ಸಾಮಾನ್ಯ ದಿನವೂ ನನಗೆ ಒಂದು ಹಬ್ಬದಂತೆ ಭಾಸವಾಗುತ್ತದೆ.

ನಮ್ಮ ನಡುವೆ ಸಣ್ಣಪುಟ್ಟ ಮುನಿಸುಗಳು, ಭಿನ್ನಾಭಿಪ್ರಾಯಗಳು ಬಂದಿಲ್ಲವೆಂದಲ್ಲ. ಕೆಲವೊಮ್ಮೆ ಮಾತುಗಳು ಮೌನವಾದಾಗ, ಕೋಪದ ಕಿಡಿ ಹೊತ್ತಿಕೊಂಡಾಗ ನನ್ನ ಮನಸ್ಸು ಚಡಪಡಿಸುತ್ತದೆ. ಆದರೆ, ಮುಂಜಾನೆಯ ಸೂರ್ಯನ ಕಿರಣಗಳಿಗೆ ಮಂಜಿನ ಹನಿಗಳು ಕರಗಿ ಹೋಗುವಂತೆ, ನಿನ್ನ ಒಂದೇ ಒಂದು ಪ್ರೀತಿಯ ಸ್ಪರ್ಶಕ್ಕೆ ನಮ್ಮೆಲ್ಲಾ ಕೋಪ–ತಾಪಗಳು ಕ್ಷಣಾರ್ಧದಲ್ಲಿ ಮಾಯವಾಗುತ್ತವೆ. ಆ ಸಣ್ಣಪುಟ್ಟ ಜಗಳಗಳೇ ನಮ್ಮ ಪ್ರೀತಿಯನ್ನು ಇನ್ನಷ್ಟು ಗಟ್ಟಿಗೊಳಿಸಿವೆ, ನಮ್ಮಿಬ್ಬರ ನಡುವಿನ ಅರ್ಥೈಸಿಕೊಳ್ಳುವಿಕೆಯನ್ನು ಇನ್ನಷ್ಟು ಆಳವಾಗಿಸಿವೆ. ಆಕಾಶದಲ್ಲಿ ನಕ್ಷತ್ರಗಳು ಎಷ್ಟೇ ಇದ್ದರೂ ಚಂದ್ರನ ಬೆಳಕೇ ಶ್ರೇಷ್ಠವಾದಂತೆ, ನನ್ನ ಜೀವನದಲ್ಲಿ ಎಷ್ಟೇ ಜನರಿದ್ದರೂ ನಿನ್ನ ಸ್ಥಾನವನ್ನು ಯಾರೂ ತುಂಬಲು ಸಾಧ್ಯವಿಲ್ಲ.

ನಾವು ಜೊತೆಯಾಗಿ ಕುಳಿತು ಕಂಡ ನೂರಾರು ಕನಸುಗಳು ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿವೆ. ನಮ್ಮದೇ ಆದ ಪುಟ್ಟ ಪ್ರಪಂಚ, ನಮ್ಮ ನಗು, ನಮ್ಮ ಮಾತುಗಳು, ಜೊತೆಯಾಗಿ ಕಳೆದ ಆ ಮೌನದ ಕ್ಷಣಗಳುಇವೆಲ್ಲವೂ ನನ್ನ ಹೃದಯದ ಅಂತರಾಳದಲ್ಲಿ



ಅಚ್ಚಳಿಯದೆ ಉಳಿದಿವೆ. ಮುಂದಿನ ದಿನಗಳಲ್ಲಿ ನಾವಿಬ್ಬರೂ ಕಂಡಿರುವ ಆ ಪ್ರತಿಯೊಂದು ಕನಸೂ ನನಸಾಗಲಿ ಎಂದು ನಾನು ಮನಸಾರೆ ಆಶಿಸುತ್ತೇನೆ. ಕಷ್ಟದ ದಿನಗಳಲ್ಲಿ ಒಬ್ಬರಿಗೊಬ್ಬರು ಆಸರೆಯಾಗಿ, ಸುಖದ ದಿನಗಳಲ್ಲಿ ಜೊತೆಯಾಗಿ ನಗುತ್ತಾ ನಾವು ಸದಾ ಹೀಗೆಯೇ ಇರಬೇಕು ಎಂಬುದೇ ನನ್ನ ಏಕೈಕ ಪ್ರಾರ್ಥನೆ.ಮುಪ್ಪಿನ ಕಾಲದಲ್ಲೂ, ತಲೆಯ ಕೂದಲು ಬೆಳ್ಳಗಾದರೂ, ಮುಖದ ಮೇಲೆ ನೆರಿಗೆಗಳು ಮೂಡಿದರೂ, ಇದೇ ಪ್ರೀತಿ, ಇದೇ ಪ್ರಣಯ, ಇದೇ ಗೌರವ ಮತ್ತು ಇದೇ ಉತ್ಸಾಹದಿಂದ ನಿನ್ನ ಕೈ ಹಿಡಿದು ನಡೆಯುವ ಆಸೆ ನನ್ನದು. ನನ್ನ ಬದುಕಿನ ಪ್ರತಿ ಹೆಜ್ಜೆಯಲ್ಲೂ ನೀನು ನನ್ನ ನೆರಳಾಗಿ, ನನ್ನ ಶಕ್ತಿಯಾಗಿ, ನನ್ನ ಅತ್ಯುತ್ತಮ ಸ್ನೇಹಿತೆಯಾಗಿ ಜೊತೆಗಿದ್ದೀಯ. ನನ್ನನ್ನು ನಾನಾಗಿ ಒಪ್ಪಿಕೊಂಡು, ನನ್ನೆಲ್ಲಾ ನ್ಯೂನತೆಗಳ ನಡುವೆಯೂ ಇಷ್ಟೊಂದು ಪ್ರೀತಿಸಿದ್ದಕ್ಕೆ ನಿನಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ನನ್ನ ಹೃದಯದ ಪ್ರತಿ ಬಡಿತದಲ್ಲೂ ನಿನ್ನದೇ ಹೆಸರಿದೆ, ನನ್ನ ಪ್ರತಿಯೊಂದು ಪ್ರಾರ್ಥನೆಯಲ್ಲೂ ನಿನ್ನದೇ ನೆನಪಿದೆ.ನಮ್ಮ ಈ ಪ್ರೀತಿಯ ಪಯಣ ಹೀಗೆಯೇ ಅನಂತದವರೆಗೂ ಸಾಗಲಿ. ನನ್ನ ಬಾಳನ್ನು ಸ್ವರ್ಗವನ್ನಾಗಿಸಿದ ನನ್ನ ಪ್ರೀತಿಯ ಸಂಗಾತಿಗೆ, ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು!

ಸದಾ ನಿನ್ನ ಪ್ರೀತಿಯ, ರೋಹನ್



ಜಯಶ್ರೀ ಜೆ ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ – ಮೊ:9449234142

ಪಿಂಚಣಿ ಸ್ಥಗಿತ, ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪಾದಯಾತ್ರೆ



ಬೀದರ್: ವೃದ್ಧಾಪ್ಯ, ವಿಧವಾ ಹಾಗೂ ಅಂಗವಿಕಲರ ಮಾಸಾಶನ ಸ್ಥಗಿತ, ಬರ ಪರಿಹಾರ ವಿತರಣೆಯಲ್ಲಿ ವಿಳಂಬ, ಅಗತ್ಯ ವಸ್ತುಗಳ ಬೆಲೆ ಏರಿಕೆ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಬಿಜೆಪಿ ಬೀದರ್ ಉತ್ತರ ಮಂಡಲದ ವತಿಯಿಂದ ಗುರುವಾರ ಬೃಹತ್ ಪಾದಯಾತ್ರೆ ನಡೆಸಿ, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಯಿತು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ ಹಾಗೂ ಮುಖಂಡ ಈಶ್ವರಸಿಂಗ್ ಠಾಕೂರ್ ಅವರ ನೇತೃತ್ವದಲ್ಲಿ ಬೆಳಿಗ್ಗೆ 9 ಗಂಟೆಗೆ ತಾಲ್ಲೂಕಿನ ಚಿಲ್ಲರ್ಗಿ ಗ್ರಾಮದಿಂದ ಆರಂಭವಾದ ಪಾದಯಾತ್ರೆ, ಸುಮಾರು 16 ಕಿ.ಮೀ. ಕ್ರಮಿಸಿ ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ತಲುಪಿತು. ನೂರಾರು ಮಹಿಳೆಯರು, ಹಿರಿಯ ನಾಗರಿಕರು, ರೈತರು ಹಾಗೂ ಬಿಜೆಪಿ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡು ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿದರು.

'ರಾಜ್ಯದಲ್ಲಿ ವೃದ್ಧಾಪ್ಯ, ವಿಧವಾ ಹಾಗೂ ಅಂಗವಿಕಲರ ಮಾಸಾಶನ ಪಡೆಯುವ ಫಲಾನುಭವಿಗಳ ಆದಾಯ ಮಿತಿಯನ್ನು 1.20 ಲಕ್ಷದಿಂದ 32 ಸಾವಿರಕ್ಕೆ ಇಳಿಸಲಾಗಿದೆ. ತಾಂತ್ರಿಕ ಸಮಸ್ಯೆ ಹಾಗೂ ಕೆವೈಸಿ ನೆಪವೊಡ್ಡಿ ಕಳೆದ ಎಂಟು ತಿಂಗಳಿಂದ ಮಾಸಾಶನ ತಡೆಹಿಡಿಯಲಾಗಿದೆ. ಇದರಿಂದ ಬಡವರು, ಹಿರಿಯ ನಾಗರಿಕರು ಸರ್ಕಾರಿ ಕಚೇರಿಗಳಿಗೆ ಅಲೆಯುವಂತಾಗಿದೆ' ಎಂದು ಪ್ರತಿಭಟನಾಕಾರರು ಆರೋಪಿಸಿದರು.

'ಜಿಲ್ಲೆಯ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದರೂ ರೈತರಿಗೆ ಸಮರ್ಪಕ ಪರಿಹಾರ ನೀಡಿಲ್ಲ. ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ನೆರವಿಗೆ ಸರ್ಕಾರ ಧಾವಿಸಬೇಕು. ಗ್ರಾಮೀಣ ಭಾಗದಲ್ಲಿ ವಿದ್ಯುತ್ ಶಾರ್ಟ್ ಸರ್ಕಿನಿಂದ ಕಬ್ಬಿನ ಬೆಳೆ

ಕನಕದಾಸ–ಕೃಷ್ಣನಂತೆ ಪ್ರೀತಿ, ಸಮಾನತೆ ಇರಲಿ :ಪಾಟೀಲ

■ ಉದಯರಶ್ಮಿ ದಿನಪತ್ರಿಕೆ




ಚಡಚಣ: 16ನೇ ಶತಮಾನದ ಶ್ರೇಷ್ಠ ಕವಿ, ದಾರ್ಶನಿಕ, ಸಂತ ಹಾಗೂ ಸಮಾಜ ಸುಧಾರಕರಾದ ಕನಕದಾಸರು ತಮ್ಮ ಕೀರ್ತನೆಗಳು, ಮುಂಡಿಗೆಗಳು ಮತ್ತು ಸಾಹಿತ್ಯ ಕೃತಿಗಳ ಮೂಲಕ ಭಕ್ತಿ, ಪ್ರೀತಿ ಹಾಗೂ ಸಾಮಾಜಿಕ ಸಮಾನತೆಯ ಸಂದೇಶ ಸಾರಿದ ಮಹಾನ್ ಸಂತರು ಎಂದು ಜೆಡಿಎಸ್ ಮುಖಂಡ ಬಿ.ಡಿ. ಪಾಟೀಲ ಹೇಳಿದರು.

ಇಂಡಿ ತಾಲೂಕಿನ ಅಂಜುಟಗಿ ಗ್ರಾಮದ ಭತಗುಣಕಿ ಕ್ರಾಸ್ ಸಮೀಪದ ಕನಕದಾಸ ಸರ್ಕಲ್ ಆವರಣದಲ್ಲಿ ಕನಕದಾಸರ 526ನೇ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ನಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆಸಿಕೊಳ್ಳಬೇಕು. ನಮ್ಮ ನಡೆ, ನುಡಿ, ಚಲನವಲನ ಹಾಗೂ ವೈಯಕ್ತಿಕ ಸ್ವಚ್ಛತೆಯಲ್ಲಿ ಶಿಸ್ತು ಮತ್ತು ಸಂಸ್ಕಾರ ಅಳವಡಿಸಿಕೊಂಡಾಗ ಮಾತ್ರ ಸಮಾಜ ಹಾಗೂ ದೇಶದ ಸುಧಾರಣೆ ಸಾಧ್ಯ. ಕನಕದಾಸರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಪಾಲಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಹನುಮಂತರಾಯಗೌಡ ಪಾಟೀಲ, ಶರಣುಗೌಡ ಬಂಡಿ, ಅಣ್ಣಾರಾಯ ಕವಟಗಿ, ರವಿ ನಾವಿ, ಸಿದ್ದರಾಯ ಬಬಲಾದ, ರಮೇಶ ಪರಗೊಂಡ, ಸಂಜೀವಕುಮಾರ ಅಡವಿ, ಧರ್ಮಣ್ಣ ಹೂಗಾರ, ಭೂತಾಳಿ ಪೂಜಾರಿ, ಭೀರಪ್ಪ ನಾಗಠಾಣ ಸೇರಿದಂತೆ ಅಂಜುಟಗಿ ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

371(ಜೆ) ಮೀಸಲಾತಿ ಹೋರಾಟಕ್ಕೆ ಬೆಂಬಲಿಸಲು ವಿರತೀಶಾನಂದಾ ಶ್ರೀಗಳಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲಾ 371(ಜೆ) ಹೋರಾಟ ಸಮಿತಿ ಮುಖಂಡರು ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲಿಸಲು ಹೋರಾಟ ಸಮಿತಿಯ ಮುಖಂಡರು ಮನಗೂಳಿ ವಿರಕ್ತ ಮಠದ ವಿರತೀಶಾನಂದ ಶ್ರೀಗಳಿಗೆ ಮನವಿ ಸಲ್ಲಿಸಿದರು.

371(ಜೆ) ಮೀಸಲಾತಿ ಜಾರಿ ಮಾಡುವಾಗ ವಿಜಯಪುರ ಜಿಲ್ಲೆಯನ್ನು ಕೈ ಬಿಟ್ಟಿದ್ದರಿಂದ ಜಿಲ್ಲೆಯ ಜನರಿಗೆ ದೊಡ್ಡ ಅನ್ಯಾಯವಾಗಿದೆ. ವಿಜಯಪುರ ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಯುವಕರು ಸರಕಾರಿ ನೇಮಕಾತಿಯಲ್ಲಿ ಮೀಸಲಾತಿ,ಕಲ್ಯಾಣ ಕರ್ನಾಟಕ ಭಾಗಕ್ಕೆಸಿಗುವ ವಿಶೇಷ ಅನುದಾನ ಸೌಲಭ್ಯದಿಂದ ಜಿಲ್ಲೆಯ ಜನರು ವಂಚಿತರಾಗಿದ್ದಾರೆ.

ಜಿಲ್ಲೆಯ 25 ಲಕ್ಷ ಜನರ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಸಂವಿಧಾನದ 371(ಜೆ) ಗೆ ತಿದ್ದುಪಡಿ ಮಾಡಿ ವಿಜಯಪುರ ಜಿಲ್ಲೆಯನ್ನು ಮೀಸಲಾತಿಯಡಿ ಸೇರಿಸುವುದು ಅತ್ಯಂತ ಅವಶ್ಯಕವಾಗಿದೆ, ಜಿಲ್ಲೆಯ ಸಮಸ್ತ ಜನರ ಪರವಾಗಿ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲಿಸಬೇಕೆಂದು ಶ್ರೀಗಳಿಗೆ ಹೋರಾಟಗಾರರು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ವಿರತೀಶಾನಂದ ಶ್ರೀಗಳು ವಿಜಯಪುರ ಜಿಲ್ಲಾ 371 ಜೆ ಹೋರಾಟ ಸಮಿತಿಯು ಜಿಲ್ಲೆಯ ಜನರ ನ್ಯಾಯಯುತ ಬೇಡಿಕೆಗಾಗಿ ನಡೆಸುತ್ತಿರುವ ಹೋರಾಟಕ್ಕೆ ಮನಗೂಳಿ ವಿರಕ್ತ ಮಠವು ಬೆಂಬಲಿಸಲಿದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಸಿದ್ರಾಮ ಬಿರಾದಾರ ಹೋರಾಟ ಸಮಿತಿಯ ಮುಖಂಡರಾದ ವಿನೋದ ಖೇಡ, ಲಾಯಪ್ಪ ಇಂಗಳೆ, ಅನಿಲ ಇಕ್ಕಡೆ, ಗುರುಲಿಂಗಪ್ಪಗೌಡ ಪಾಟೀಲ ಉಪಸ್ಥಿತರಿದ್ದರು.

ವಿಜಯಪುರ: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇ–ಖಾತಾ ಮೇಳ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮಹಾನಗರಪಾಲಿಕೆ ವ್ಯಾಪ್ತಿಯ ಎಲ್ಲ ಆಸ್ತಿ ಮಾಲೀಕರು ಇ–ಆಸ್ತಿ (ಇ–ಖಾತಾ) ಪಡೆಯುವುದು ಕಡ್ಡಾಯವಾಗಿದ್ದು, ಇ–ಖಾತಾ ವಿತರಣಾ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ನ.30ರಂದು ನಗರದ ಮೂರು ವಲಯಗಳ ಆಯ್ದ ವಾರ್ಡ್‌ಗಳಲ್ಲಿ ವಿಶೇಷ ಇ–ಖಾತಾ ಮೇಳ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಅರ್ಜಿ ಸ್ವೀಕರಿಸಲಾಗುವುದು. ಮೊದಲನೇ ವಲಯದ ವಾರ್ಡ್ ಸಂಖ್ಯೆ 6ರ ಕೆ.ಎಚ್.ಬಿ. ಕಾಲನಿ ಹಿಂಭಾಗದ ಸರ್ಕಾರಿ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆ ಸಂಖ್ಯೆ 24, ಎರಡನೇ ವಲಯದ ವಾರ್ಡ್ ಸಂಖ್ಯೆ 17ರ ರಂಭಾಪುರ ಗ್ರಾಮದ ಹನುಮಾನ ದೇವಸ್ಥಾನ ಹಾಗೂ ಮೂರನೇ ವಲಯದ ವಾರ್ಡ್ ಸಂಖ್ಯೆ 21 ಮತ್ತು 22ರ ಗಣೇಶ ನಗರದ ಲಕ್ಷ್ಮೀ ಗುಡಿ ಸಮುದಾಯ ಭವನದಲ್ಲಿ ಅರ್ಜಿ ಸ್ವೀಕರಿಸಲಾಗುತ್ತಿದೆ. ಆಸ್ತಿ ಮಾಲೀಕರು ಕರ್ನಾಟಕ ಒನ್ –ಪ್ರಜಾ ಸೇವಾ ಕೇಂದ್ರ ಮಹಾನಗರಪಾಲಿಕೆಯ ವಲಯ ಕಚೇರಿಗಳಲ್ಲಿ ಹಾಗೂ ಪಾಲಿಕೆ ಸಿಬ್ಬಂದಿ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಅರ್ಜಿ ಸಲ್ಲಿಸಬಹುದು. ಅಲ್ಲದೆ, https://eaasthi.karnataka.gov.in ಪೋರ್ಟಲ್ ಮೂಲಕವೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆಸ್ತಿ ಮಾಲೀಕತ್ವ ಸಾಬೀತುಪಡಿಸುವ ನೋಂದಾಯಿತ ಆಸ್ತಿ ದಾಖಲಾತಿ ಪತ್ರ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ ಅಥವಾ ಪ್ಯಾನ್ ಕಾರ್ಡ್ ಅಥವಾ ಆಧಾರ್ ಕಾರ್ಡ್‌ಗಳ ಪೈಕಿ ಯಾವುದಾದರೊಂದು, ಕಟ್ಟಡ ಅಥವಾ ನಿವೇಶನದ ಜಿಪಿಎಸ್ ಛಾಯಾಚಿತ್ರ, ಕಟ್ಟಡ ಪರವಾನಗಿ ಪ್ರತಿ ಹಾಗೂ ಚಾಲ್ತಿ ವರ್ಷದ ಆಸ್ತಿ ತೆರಿಗೆ ಪಾವತಿ ರಸೀದಿಯನ್ನು ಅರ್ಜಿಯೊಂದಿಗೆ ದಾಖಲೆ ಸಲ್ಲಿಸಬೇಕು.

ನ.30ರಂದು ಮೂರು ವಾರ್ಡ್‌ಗಳಲ್ಲಿ ಅರ್ಜಿ ಸ್ವೀಕಾರ। ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ ಸಲಹೆ

ಇ.ಸಿ. ಸಲ್ಲಿಸುವುದು ಕಡ್ಡಾಯವಲ್ಲ. ಇ.ಸಿ. ಸಲ್ಲಿಸಿದಲ್ಲಿ ವಹಿವಾಟು ನಡೆಸಲು ಅನುಕೂಲವಾಗುವ ಟ್ರಾನ್ಸಾಕ್ಷಬಲ್ ಇ–ಖಾತಾ ಹಾಗೂ ಇ.ಸಿ. ಸಲ್ಲಿಸದಿದ್ದಲ್ಲಿ ನಾನ್–ಟ್ರಾನ್ಸಾಕ್ಷಬಲ್ ಇ–ಖಾತಾ ನೀಡಲಾಗುವುದು. ಆದ್ದರಿಂದ ಪಾಲಿಕೆ ವ್ಯಾಪ್ತಿಯ ಆಸ್ತಿ ಮಾಲೀಕರು ಇದರ ಸದುಪಯೋಗ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಮಹಾನಗರಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಬಣೆಯಿಂದ ಜರುಗಿದ ಮಹಾಲಕ್ಷ್ಮಿ ಜಾತ್ರೆ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ಪಟ್ಟಣದ ಡೋಣಿ ಶ್ರೀ ಹನುಮಾನ್ ಮಂದಿರದ (ಶ್ರೀ ರಂಗರಾವ್ ಮಹಾರಾಜರ ಮಠದ ಹತ್ತಿರ)ಹತ್ತಿರವಿರುವ ಕೋಟೆಗೋಡೆಯ ಶ್ರೀ ಮಹಾಲಕ್ಷ್ಮಿ ದೇವಿಯ ಜಾತ್ರೋತ್ಸವವು ಶುಕ್ರವಾರ ವಿಜೃಂಭಣೆಯಿಂದ ಜರುಗಿತು.

ದಿ. ವೇ॥ ಪುರುಷೋತ್ತಮಾಚಾರ್ಯ ಗ್ರಾಂ ಪುರೋಹಿತ ಅವರ ಸಹೋದರರಾದ ಶ್ರೀಧರ ಗ್ರಾಂ ಪುರೋಹಿತ ಹಾಗೂ ಶಿಷ್ಯಂದಿರಿಂದ ನೇತೃತ್ವದಲ್ಲಿ ನೇರವೇರಿದ ಈ ಜಾತ್ರೋತ್ಸವದ ಅಂಗವಾಗಿ ಬೆಳಿಗ್ಗೆ 8 ಘಂಟೆಗೆ ಶ್ರೀದೇವಿಗೆ ಮಹಾಭಿಷೇಕ, ಪುಷ್ಪಾರ್ಚನೆ,ಅಲಂಕಾರಮಹಾಮಂಗಳಾರತಿ ಜರುಗಿತಲ್ಲದೇ 8 ಘಂಟೆಯಿಂದ ಸುಮಂಗಲೆಯ ಕುಂಭ ಮೇಳದೊಂದಿಗೆ ಫಲ್ಲಕ್ಕಿ ಉತ್ಸವ ಹಾಗೂ ಶ್ರೀ ಲಕ್ಷ್ಮಿ ದೇವಿಯ ಭಾವಚಿತ್ರದದೊಂದಿಗೆ ಗಂಗಸ್ಥಳ ನೆರವೇರಿ ನಂತರ ಮೇರವಣಿಗೆಯು ಪ್ರಮುಖ ಬೀದಿಗಳಲ್ಲಿ ಹಾಯ್ದು ಪುನಃ ಮಂದಿರ ತಲುಪಿತು. ನಂತರ ಹೋಮ ಹವನ ಕಾರ್ಯಕ್ರಮಗಳು ಮಂದಿರದ ಆವರಣದಲ್ಲಿ ಜರುಗಿದವು ಮದ್ಯಾಹ್ನ 1 ಘಂಟೆಯಿಂದ 3 ಘಂಟೆಯವರೆಗೆ ತೀರ್ಥ ಪ್ರಸಾದ ಜರುಗಿತು.

ಸಾಯಂಕಾಲ6ಘಂಟೆಗೆಶ್ರೀಮಹಾಲಕ್ಷ್ಮೀ ಹಾಗೂ ಗಾಯತ್ರಿ ಭಜನಾ ಮಂಡಳಿಯವರಿಂದ ಶ್ರೀ ಕೃಷ್ಣ ಧ್ಯಾನ, ಮಂತ್ರಜಪ ಹಾಗೂ ಲಕ್ಷ್ಮಿ ಸೋಬಾನ ಹಾಡುಗಳು ಜರುಗಿದವಲ್ಲದೇ ಸುಮಂಗಲೆಯರಿಗೆ ಉಡಿ ತುಂಬುವ ಕಾರ್ಯಕ್ರಮವು ಜರುಗಿತು.

ಈ ಜಾತ್ರೋತ್ಸವದ ನೇತೃತ್ವವನ್ನು ಶ್ರೀ ಕೋಟೆಗೋಡೆ ಮಹಾಲಕ್ಷ್ಮಿ ದೇವಿ ಉತ್ಸವ ಸಮೀತಿಯ ಅಧ್ಯಕ್ಷ ತಿರುಪತಿ ಹಂಚಾಟೆ, ಉಪಾಧ್ಯಕ್ಷ ಶ್ರೀಕಾಂತ ಕುಲಕರ್ಣಿ, ಅಶೋಕ ಪತ್ತಾರ, ರಾಜು ಕಮ್ಮಾರ, ನಾಗೇಶ ಹಂಚಾಟೆ, ಅಶೋಕ ಪತ್ತಾರ ಶಿಕ್ಷಕರು, ಶ್ರೀನಿವಾಸ ಹಂಚಾಟೆ, ತುಳಸಿರಾಮ ಹಂಚಾಟೆ, ಶ್ರೀಧರ ಗ್ರಾಮಪೊರೋಹಿತ, ರಾಘವೇಂದ್ರ, ಬಸವರಾಜ ಅಲೇಗಾವಿ, ಧಶರಥ ಖಂಡೇಕರ, ಮೊದಲಾದವರು ವಹಿಸಿದ್ದರು.



ದಾಸಶ್ರೇಷ್ಠ ಭಕ್ತ ಕನಕದಾಸ ಜಯಂತಿ ಆಚರಣೆ

■ ಉದಯರಶ್ಮಿ ದಿನಪತ್ರಿಕೆ

ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಆಚರಣೆ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ, ಕನ್ನಡ ವಿಭಾಗದ ಸಹಯೋಗದಲ್ಲಿ ದಾಸ ಶ್ರೇಷ್ಠ ಭಕ್ತ ಕನಕದಾಸ ರವರ ಭಕ್ತಿಭಾವದಿಂದ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಜಯಂತಿ ಆಚರಿಸಲಾಯಿತು.ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಶ್ರೀನಿವಾಸ ಎ.ಟಿ, ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ, ಡಾ.ಉಷಾದೇವಿ ಹಿರೇಮಠ, ಡಾ.ಅನೀಲ.ನಾಯಕ, ಮಹಾವಿದ್ಯಾಲಯದ ಇನ್ನಿತರ ಬೋಧಕ–ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಮಕ್ಕಳಿಗೆ ಜ್ಞಾನದರ್ಶನ; ಗ್ರಾಮೀಣ ಸಾಕ್ಷ್ಯಚಿತ್ರ ವೀಕ್ಷಣೆ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟಿ: ಪಠ್ಯಪುಸ್ತಕದ ಜ್ಞಾನದ ಜೊತೆಗೆ ನೈಜ ಅನುಭವ ನೀಡುವ ಉದ್ದೇಶದಿಂದ ಇಲ್ಲಿನ ಪ್ರತಿಷ್ಠಿತ ಎಂ.ಜಿ.ಎಂ.ಕೆ. ಆಂಗ್ಲ ಮಾಧ್ಯಮ ಶಾಲೆಯ (M.G.M.K. English Medium School) ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ತಂಡವು ಬಾಗಲಕೋಟೆ ಜಿಲ್ಲೆಯ ಸುಪ್ರಸಿದ್ಧ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾದ ಕೂಡಲಸಂಗಮಕ್ಕೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿತು.

ಗ್ರಾಮೀಣ ಸಾಕ್ಷ್ಯಚಿತ್ರ ಮತ್ತು ಕ್ಷೇತ್ರ ಅಧ್ಯಯನ:

ಪ್ರವಾಸದ ವಿಶೇಷ ಆಕರ್ಷಣೆಯಾಗಿ ವಿದ್ಯಾರ್ಥಿಗಳು ಕೂಡಲಸಂಗಮದ ಗ್ರಾಮೀಣ ಸೊಗಡು, ಕೃಷಿ ಪದ್ಧತಿ, ನದಿ ತೀರದ ಜನಜೀವನ ಮತ್ತು ಶರಣರ ಪರಂಪರೆಯನ್ನು ಬಿಂಬಿಸುವ 'ಗ್ರಾಮೀಣ ಸಾಕ್ಷ್ಯಚಿತ್ರ'ದ (Rural Documentary) ಕುರಿತು ಮಾಹಿತಿ ಪಡೆದುಕೊಂಡರು. ಸ್ಥಳೀಯ ಸಂಸ್ಕೃತಿ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಗ್ರಾಮೀಣ ಪರಿಸರದ ಮಹತ್ವವನ್ನು ವಿದ್ಯಾರ್ಥಿಗಳು ಪ್ರತ್ಯಕ್ಷವಾಗಿ ವೀಕ್ಷಿಸಿ ದಾಖಲಿಸಿಕೊಂಡರು.

ಶೈಕ್ಷಣಿಕ ಮತ್ತು ನೈತಿಕ ಮೌಲ್ಯಗಳ ಕಲಿಕೆ:

ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಓದಿದ ಇತಿಹಾಸ ಮತ್ತು ಭೂಗೋಳ ವಿಷಯಗಳನ್ನು ನೇರವಾಗಿ ನೋಡಿ ಕಲಿಯಲು ಹಾಗೂ ಬಸವಣ್ಣನವರ ಸಮಾನತೆ, ಕಾಯಕ ಮತ್ತು ದಾಸೋಹ ತತ್ವಗಳ ಪ್ರೇರಣೆಯ ಜೊತೆಗೆ, ಕ್ಷೇತ್ರ ಅಧ್ಯಯನದ ಮೂಲಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ, ಶಿಸ್ತು ಮತ್ತು ಸಾಮೂಹಿಕ ಜೀವನದ ಮೌಲ್ಯಗಳು ವೃದ್ಧಿಸಲು ಈ ಪ್ರವಾಸ ಸಹಕಾರಿಯಾಯಿತು. ಶಾಲೆಯ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ನಡೆದ ಈ ಪ್ರವಾಸದಲ್ಲಿ ಮುಖ್ಯ ಗುರುಮಾತೆಯರಾದ ಎ ಎಸ್ ಸರೂರ್, ಸೇರಿದಂತೆ ಶಿಕ್ಷಕ ವೃಂದದವರು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಸದಸ್ಯರಾಗಿ ಪವಿತ್ರಾ ಕುಂಬಾರ ನೇಮಕ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಗರದ ನಗರಸಭೆ 9ನೇ ವಾರ್ಡಿನ ನಿವಾಸಿ ಪವಿತ್ರಾ ಸಚಿನ ಕುಂಬಾರ ಅವರನ್ನು ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ನನ್ನ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿಯುತ ಹುದ್ದೆ ನೀಡಿದ ರಾಜ್ಯ ಸರ್ಕಾರಕ್ಕೆ, ಶಾಸಕ ಅಶೋಕ ಮನಗೂಳಿ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ ಅವರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

ಮೂಢನಂಬಿಕೆ ತೊರೆದು ಕನಕದಾಸರ ಸಂದೇಶ ಪಾಲಿಸಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಿಜವಾಗಿಯೂ ಭಕ್ತ ಕನಕದಾಸರಿಗೆ ಗೌರವ ಸಲ್ಲಿಸಬೇಕೆಂದರೆ ಮೊದಲು ನಾವು ಮೂಢನಂಬಿಕೆಗಳಿಂದ ದೂರವಿರಬೇಕು. ದೇವರ ಹೆಸರಿನಲ್ಲಿ ಯಾವುದೇ ಕಾರಣಕ್ಕೂ ಪ್ರಾಣಿ ಹಿಂಸೆ ನಡೆಯಬಾರದು. ಕೇವಲ ಜಯಂತಿಗಳನ್ನು ಆಚರಿಸುವುದಕ್ಕೆ ಸೀಮಿತವಾಗದೆ, ಮಹನೀಯರ ತತ್ವ, ಆದರ್ಶ ಹಾಗೂ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗುಬ್ಬೇವಾಡ ಶ್ರೀಮಠದ ಕನ್ನಯ್ಯ ಮಹಾರಾಜರು ಹೇಳಿದರು.

ಸಿಂದಗಿ ನಗರದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಸಿಂದಗಿ ತಾಲೂಕು ಆಡಳಿತ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಸಂತ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಇಂದಿನ ಸಮಾಜದಲ್ಲಿ ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ಅನೇಕ ಮೂಢನಂಬಿಕೆಗಳು ಮುಂದುವರಿದಿವೆ. ದೇವರ ಮೇಲಿನ ನಿಜವಾದ ಭಕ್ತಿ ಎಂದರೆ ಜೀವಿಗಳ ಮೇಲೆ ಕರುಣೆ ತೋರುವುದು, ಎಲ್ಲರನ್ನೂ ಸಮಾನವಾಗಿ ಕಾಣುವುದು ಹಾಗೂ ಮಾನವೀಯತೆಯಿಂದ ಬದುಕುವುದಾಗಿದೆ ಎಂದರು. ಇದೇ ಸಂದರ್ಭದಲ್ಲಿ ಹಾಲುಮತ ಸಮಾಜದ ಮಹಿಳಾ ರಾಜ್ಯಾಧ್ಯಕ್ಷೆ ಶಿಲ್ಪಾ ಕುದರಗೊಂಡ ಉಪನ್ಯಾಸ ನೀಡಿದರು. ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂತೋಷ ಸಾಲಿ, ತಾಪಂ ಇಒ ಅನಿಲ ಹಳ್ಳಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಸೈಕ್ಲಿಂಗ್ ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆದ ಪುನೀತ ಬಿರಾದಾರ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ನಗರಸಭೆ ಆಯುಕ್ತ ರವಿ ಶಿರಗುಪ್ಪಿ, ಪಿಎಸ್‌ಐ ಶ್ರೀಕಾಂತ ಕಾಂಬಳೆ, ರವೀಂದ್ರ ಬಂಥನಾಳ, ಗ್ರೇ2 ತಹಶೀಲ್ದಾರ್ ಇಂದ್ರಾಬಾಯಿ ಬಳಗಾನೂರ, ಸಚಿನ ಹುಟಗಿ, ಪ್ರಶಾಂತ ಸಾಣಿ, ಭೀಮಾಶಂಕರ ವಾಘಮೋರೆ, ಆಯ್.ಎ.ಮಕಾಂದಾರ, ಮಲ್ಲಿಕಾರ್ಜುನ ಬಗಲಿ, ಮಲಕಣ್ಣ, ಕುರುಬ ಸಮಾಜದ ತಾಲೂಕಾಧ್ಯಕ್ಷ ನಿಂಗಣ್ಣ ಬುಳ್ಳಾ, ಮಲ್ಲಿಕಾರ್ಜುನ ಸಾವಳಸಂಗ, ಸಿದ್ದು ಹಿರೇಕುರುಬರ, ಎಪಿಎಂಸಿ ಅಧ್ಯಕ್ಷ ಕಲ್ಲಪ್ಪ ನಾಯ್ಕೋಡಿ, ಪ್ರಕಾಶ ಹಿರೇಕುರುಬರ, ಎಂ. ಎಂ.ಚಟ್ಟರಕಿ, ಮಡ್ಡೆಪ್ಪ ಸೊನ್ನದ, ಸಿದ್ದು ಬುಳ್ಳಾ, ಗೀತಾ ಅಥಣಿ ಸೇರಿದಂತೆ ಸಮಾಜದ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್.ಆಲಗೂರ ಪ್ರಾಸ್ತವಿಕ ಮಾತನಾಡಿದರು.

ಸಂಗೊಳ್ಳಿರಾಯಣ್ಣ ನೌಕರರ ಸಂಘದ ಅಧ್ಯಕ್ಷ ರಾಯಪ್ಪ ಇವಣಗಿ ಸ್ವಾಗತಿಸಿದರು. ಸರಕಾರಿ ಶಾಲಾ ವಿದ್ಯಾರ್ಥಿಗಳು ನಾಡಗೀತೆ ಪ್ರಸ್ತುತ ಪಡಿಸಿದರು. ಶಿಕ್ಷಕ ಎಸ್. ಎಸ್.ಸಾತಿಹಾಳ ನಿರೂಪಿಸಿ ವಂದಿಸಿದರು.

ಯುವಕರೆ